ANANTHKUMAR PRATISHTHANA

# ಅನಂತಪಥ

ಚಾಣಾಕ್ಷತೆಯನ್ನು ಮೆರೆದು
ಮಿರುಗಿದ ರಾಜಕೀಯ ಧ್ರುವ ನಕ್ಷತ್ರ
ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-3
ಬಾಬು ಕೃಷ್ಣಮೂರ್ತಿ



ಸಂಪುಟ-1 ಫೆಬ್ರವರಿ - 2021 ಸಂಚಿಕೆ - 8

## “ನಮ್ಮ ಮೆಟ್ರೋ” – ಅನಂತ ಪರಿಶ್ರಮದ ಸಾಧನೆ



“ಬೆಂಗಳೂರಿನ ನಮ್ಮ ಮೆಟ್ರೋ ರೈಲುಗಳನ್ನು ಬಳಸಿ 458238 ಜನರು ಪ್ರಯಾಣ ಮಾಡಿದರು, ಇದೊಂದು ದಾಖಲೆ” ಎಂದು 2019 ರ ಸೆಪ್ಟೆಂಬರ್ ತಿಂಗಳ ಮೊದಲವಾರದಲ್ಲಿ ಕರ್ನಾಟಕದ ಎಲ್ಲ ದಿನಪತ್ರಿಕೆಗಳೂ ವರದಿಮಾಡಿದವು. 2019 ರ ಒಂದೇ ವರ್ಷದಲ್ಲಿ ಸುಮಾರು 13.37 ಕೋಟಿ ಜನರು ಮೆಟ್ರೋ ಬಳಸಿ ಪ್ರಯಾಣಿಸಿದ್ದರು! ಇಷ್ಟೂ ಜನರು ಪ್ರಯಾಣಿಸಿದ್ದು ಕೇವಲ 42.3 ಕಿಲೋಮೀಟರ್ ಉದ್ದದ ರೈಲು ಮಾರ್ಗದೊಳಗೆ ಎನ್ನುವುದೂ ಗಮನಾರ್ಹ.

ಒಂದು ನಗರಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಥಾನಮಾನ ದೊರೆಯಬೇಕಾದರೆ ನಗರಕ್ಕೊಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ನಗರದೊಳಗೆ ಸುಗಮ ಸಂಚಾರ ವ್ಯವಸ್ಥೆಯಿರಬೇಕು. ಈ ಕುರಿತು ಕಾರ್ಯಯೋಜನೆ ರೂಪಿಸಲು ಶ್ರೀ ಅನಂತಕುಮಾರ್ ಅವರು ತಾವು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದರಾಗಿ ಆಯ್ಕೆಯಾದ ಕ್ಷಣದಿಂದಲೇ ಆಲೋಚನೆಗೆ ತೊಡಗಿದ್ದರು. ಕ್ಷೇತ್ರದ ಅತಿ ಕಿರಿಯ ಸಂಸದರೆಂಬ ಹೆಗ್ಗಳಿಕೆಯೊಂದಿಗೆ ಆಯ್ಕೆಯಾದ ಅನಂತಕುಮಾರರಿಗೆ ದೊಡ್ಡ ಸವಾಲೊಂದು ಎದುರಾಗಿತ್ತು.

ಕಳೆದ ಶತಮಾನದ ಕೊನೆಯ ದಶಕದಲ್ಲಿ ಬೆಂಗಳೂರಿನಲ್ಲಿ ವಾಸ ಮಾಡಿದವರಿಗೆ ನಗರದಲ್ಲಿ ಪ್ರಯಾಣಿಸಲು ಪಟ್ಟ ಪ್ರಯಾಸದ ಅನುಭವವಿದೆ. ಬೆಂಗಳೂರು ನಗರವು ನಾಲ್ದೆಸೆಗಳಲ್ಲಿಯೂ ನಾಗಾಲೋಟದಿಂದ ಬೆಳೆಯುತ್ತಿತ್ತು. ಭಾರತದ ಸಿಲಿಕಾನ್ ನಗರವೆಂಬ ಖ್ಯಾತಿಗನುಗುಣವಾಗಿ ಜಗತ್ತಿನ ಎಲ್ಲ ಕಡೆಗಳಿಂದ ನವೋದ್ಯಮಿಗಳು ಬೆಂಗಳೂರಿನತ್ತ ಮುಖ ಮಾಡಿದ್ದರು. ಯುವಕರು ಉದ್ಯೋಗವನ್ನು ಅರಸಿಕೊಂಡು ದೇಶದ ಮೂಲೆಮೂಲೆಗಳಿಂದ ನಗರಕ್ಕೆ ಆಗಮಿಸತೊಡಗಿದರು. ಬೆಂಗಳೂರಿನ ರಸ್ತೆಗಳಲ್ಲಿ ವಾಹನ ದಟ್ಟಣೆ ವಿಪರೀತವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಶ್ರೀ ಅನಂತಕುಮಾರ್ ಅವರಿಗೆ ತತ್ ಕ್ಷಣ ಎದುರಾದ ಸವಾಲುಗಳೆಂದರೆ




ದೆಹಲಿಯ ಮೆಟ್ರೋ ನಿಲ್ದಾಣವೊಂದಕ್ಕೆ
ಸರ್ ಎಂ ವಿಶ್ವೇಶ್ವರಯ್ಯನವರ ಹೆಸರಿಟ್ಟ ಸಂದರ್ಭದ ಚಿತ್ರ

ಬೆಂಗಳೂರಿನಲ್ಲಿ ಸ್ಥಾಪಿಸಬೇಕಾಗಿದ್ದ ಒಂದು ಅಂತಾರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣ ಮತ್ತು ಸುಗಮ ನಗರ ಸಾರಿಗೆ ವ್ಯವಸ್ಥೆ.

ಆ ವೇಳೆಗೆ, ರಾಜ್ಯ ರಾಜಕಾರಣಿಗಳು ದೂರದರ್ಶಿತ್ವದ ಕೊರತೆಯಿಂದಾಗಿ ಬೆಂಗಳೂರಿಗೆ ಸೂಕ್ತವಲ್ಲದ ಮಾನೋರೈಲಿನಂತಹ ದುಬಾರಿ ವೆಚ್ಚದ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಹವಣಿಕೆಯಲ್ಲಿದ್ದರು. ಅನಂತಕುಮಾರರು ಇದನ್ನು ಬಲವಾಗಿ ವಿರೋಧಿಸಿದರು. 2001 ರಲ್ಲಿ ರಾಜ್ಯ ಸರಕಾರವು ಯುಬಿ ಗ್ರೂಪ್ ಸಂಸ್ಥೆಯ ಸಹಯೋಗದಲ್ಲಿ ಎಲಿವೇಟೆಡ್ ಲೈಟ್ ರೈಲ್ ಟ್ರಾನ್ಸಿಟ್ ಸಿಸ್ಟಂ ಎಂಬ ರೈಲುವ್ಯವಸ್ಥೆಯ ನಿರ್ಮಾಣಕ್ಕೆ ಒಪ್ಪಂದ ಮಾಡಿಕೊಂಡಿತು. ಇದರ ಕಾರ್ಯಸಾಧ್ಯತೆಗಳ ಬಗ್ಗೆ ಅನುಮಾನವಿದ್ದ ಅನಂತಕುಮಾರರು 2001 ರಲ್ಲಿ ನಗರಾಭಿವೃದ್ಧಿ ಸಚಿವರಾಗುತ್ತಲೇ ಯುಬಿ ಗ್ರೂಪ್ ಸಂಸ್ಥೆಯೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ರದ್ದು ಮಾಡಿದರು. ಈ ಮೂಲಕ, ಸಂಸದರಾಗಿ ಆಯ್ಕೆಯಾಗುವ ಮೊದಲೇ ತಾವು ಕಂಡಿದ್ದ ನಮ್ಮ ಮೆಟ್ರೋ ಕನಸಿಗೆ ಸಾಕಾರ ರೂಪ ನೀಡಲು ಉದ್ಯುಕ್ತರಾದರು.

ಅದಾಗಲೇ ದೇಶದ ರಾಜಧಾನಿ ನವದೆಹಲಿಯಲ್ಲಿ ಮೆಟ್ರೋ ಯೋಜನೆ ಚಾಲನೆಯಲ್ಲಿತ್ತು. ಅದಕ್ಕೆ ವಿನಿಯೋಗಿಸಲು ಬೇಕಾಗುವಷ್ಟು ಅನುದಾನವನ್ನು ಅನಂತ ಕುಮಾರ್ ವಾಜಪೇಯಿ ಸರ್ಕಾರದಿಂದ ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು. ಮಾತ್ರವಲ್ಲ, ತಾವು ಸಚಿವರಾಗಿದ್ದ ಅವಧಿಯಲ್ಲೇ ಯೋಜನೆ ಶೀಘ್ರಗತವಾಗಿ ಜಾರಿಗೊಳ್ಳಲು ಕಾರಣರಾದರು. ದೆಹಲಿ ಮೆಟ್ರೋ ಯೋಜನೆಯ ಯಶಸ್ಸಿನಿಂದ ಉತ್ತೇಜಿತರಾದ ಅನಂತಕುಮಾರ್ ನಗರಾಭಿವೃದ್ಧಿ ಯೋಜನೆಯಲ್ಲಿ ಮಹತ್ತ್ವದ ನೀತಿನಿರೂಪವೊಂದರ ಕರಡು ತಯಾರಿಸಿದರು. ದೇಶದ ಯಾವುದೇ ನಗರದ ಜನಸಂಖ್ಯೆ 15 ಲಕ್ಷವನ್ನು ಮೀರಿದ್ದರೆ, ಆ ನಗರವು ಮೆಟ್ರೋ ಸಾರಿಗೆ ವ್ಯವಸ್ಥೆ ಪಡೆಯಲು

ಪುಟ 4 ರಲ್ಲಿ ಮುಂದುವರೆದಿದೆ





**ನವಯುಗದ ಆಹಾರ ಮತ್ತು ಆರೋಗ್ಯ**
ಕೊಳ್ಳೇಗಾಲ ಶರ್ಮ
ಪುಟ - 8

**ಮನೆಬಾಗಿಲಿಗೆ ಬಂದ ಹರಿದಾಸರು!**
ಶ್ರೀಮತಿ ಸುವಾಸಿನಿ ನಾರಾಯಣ್
ಪುಟ - 5



**ಸಾರ್ವಜನಿಕ ಜೀವನಕ್ಕೆ ಕೃತಕ ಬುದ್ಧಿಮತ್ತೆಯ ಕೊಡುಗೆ**
ಡಾ. ರಜತ್ ಮೂನ
ಪುಟ - 10





**ಮಗಳ ಮದುವೆಯ ನೆನಪುಗಳು**
ಶ್ರೀಮತಿ ಪ್ರತಿಭಾ ಓಕ್
ಪುಟ - 11

# ಅದಮ್ಯ ಚೇತನದ ನಿತ್ಯ ಅನ್ನದಾನ ಯೋಜನೆ



ವಿಶೇಷ ಲೇಖನ - ಕೆ ಜನಾರ್ದನ ತುಂಗ

"ಯೋ ಮಾ ದದಾತಿ ಸ ಇದೇವ ಮಾವಾಃ" – ಯಾರು ನನ್ನನ್ನು ಅನ್ನಾರ್ಥಿಗಳಿಗೆ ಕೊಡುತ್ತಾನೆಯೋ ಅವನು ಹಾಗೆ ನನ್ನನ್ನು ಕಾಪಾಡುತ್ತಾನೆ
**- ತೈತ್ತಿರೀಯ ಉಪನಿಷತ್**

ದಿವಂಗತ ಅನಂತಕುಮಾರರ ಮನೆಗೆ ಭೇಟಿ ನೀಡಿದ ಪ್ರತಿಯೊಬ್ಬರೂ ಅವರ ಆತಿಥ್ಯದ ಸವಿಯನ್ನು ಅನುಭವಿಸಿರುತ್ತಾರೆ. ಅವರು ದೂರದ ದೆಹಲಿಯಲ್ಲಿದ್ದಾಗಲೂ ಮನೆಗೆ ಬಂದವರಿಗೆ ಊಟ ಹಾಕಿಸದೆ ಕಳುಹಿಸುತ್ತಿರಲಿಲ್ಲ ಎಂದು ಎಲ್ಲರೂ ಸ್ಮರಿಸಿಕೊಳ್ಳುತ್ತಾರೆ. "ಅವರು ಪ್ರಯಾಣಕ್ಕೆ ಹೊರಟಾಗಲೂ, ಅದು ವಿಮಾನ ಪ್ರಯಾಣವೇ ಇರಲಿ, ಇಬ್ಬರು ಮೂವರಿಗಾಗುವಷ್ಟು ಆಹಾರವನ್ನು ಕಟ್ಟಿಸಿಕೊಂಡೇ ಹೊರಡುತ್ತಿದ್ದರು" ಎಂದು ಶ್ರೀಮತಿ ತೇಜಸ್ವಿನಿಯವರು ನೆನಪಿಸಿಕೊಳ್ಳುತ್ತಾರೆ..

ಈ ಹಂಚಿ ತಿನ್ನುವ ಗುಣವು ಅನಂತಕುಮಾರರ ವ್ಯಕ್ತಿತ್ವದ ವಿಶೇಷಗಳಲ್ಲೊಂದು. ಅವರ ಎರಡನೆಯ ಪುಣ್ಯತಿಥಿಯ ಸಂದರ್ಭದಲ್ಲಿ19/11/2020 ರಂದು ನಿತ್ಯ ಅನ್ನದಾನ ಕಾರ್ಯಕ್ರಮವು ಗವಿಪುರದ ಅದಮ್ಯ ಚೇತನ ಸಂಸ್ಥೆಯ ಬಳಿ ಇರುವ ಕಲಾಜ್ಯೋತಿ ಕಟ್ಟೆಯಲ್ಲಿ ಪ್ರಾರಂಭವಾಗಲು ಇದೇ ಪ್ರೇರಕವಾಯಿತು. ಇದಾಗಿ ಕೆಲವೇ ದಿನಗಳಲ್ಲಿ ಅಂದರೆ 03/12/2020 ರಂದು ಜಯನಗರದ ನಾಲ್ಕನೇ ಬ್ಲಾಕಿನ ಕನ್ನಡಕಟ್ಟೆಯಲ್ಲಿ ವಾರಕ್ಕೆರಡು ದಿನವೆಂದು ಪ್ರಾರಂಭವಾದ ಅನ್ನದಾನ ಇಂದು ಭಾನುವಾರದ ಹೊರತಾಗಿ ವಾರದ ಆರೂ ದಿನಗಳಲ್ಲಿ ನಡೆಯುತ್ತಿದೆ. ಇದರ ಜೊತೆಗೆ ರಾಜರಾಜೇಶ್ವರಿ ನಗರದಲ್ಲಿ ಪ್ರತಿ ಶುಕ್ರವಾರ ಅನ್ನದಾನ ನಡೆಯುತ್ತಿದೆ.

**ಅನ್ನಪೂರ್ಣೇ ಸದಾಪೂರ್ಣೇ...**

ನಿತ್ಯ ಅನ್ನದಾನ ನಡೆಯುವ ಪ್ರತಿಯೊಂದು ಕಡೆಯಲ್ಲೂ ಮಧ್ಯಾಹ್ನ ಸುಮಾರು 150 ಜನರಿಗೆ ಪೌಷ್ಟಿಕವಾದ ಆಹಾರವನ್ನು ಬಿಸಿಬಿಸಿಯಾಗಿ ನೀಡಲಾಗುತ್ತದೆ. ಅನ್ನ ಸಾಂಬಾರು ಅಥವ ಸಾರು, ಮತ್ತು ಯಾವುದಾದರೊಂದು ಭಾತ್, ಕೆಲವೊಮ್ಮೆ ವಿಶೇಷ ಸಂದರ್ಭಗಳಲ್ಲಿ ಸಿಹಿ, ಇವು ದಿನನಿತ್ಯದ ಮೆನು. ಅದಮ್ಯ ಚೇತನದ ಸರಬರಾಜು ವಾಹನ ಬಂದೊಡನೆ ಸುತ್ತಮುತ್ತ ವಾಸಿಸುವ ಬಡವರು, ಕೂಲಿ ಕಾರ್ಮಿಕರು, ದಾರಿಹೋಕರು, ತಳ್ಳುಗಾಡಿ ವ್ಯಾಪಾರಸ್ಥರು, ಅಸಹಾಯಕ ಮಹಿಳೆಯರು ಸರತಿಯ ಸಾಲಿನಲ್ಲಿ ನಿಲ್ಲುತ್ತಾರೆ. ದಾರಿಯಲ್ಲಿ ಹಾದುಹೋಗುವ ಅನೇಕ ಆಟೋ ಚಾಲಕರೂ ಈ ಫಲಾನುಭವಿಗಳಲ್ಲಿ ಸೇರಿದ್ದಾರೆ.

ಅನ್ನ ಬಡಿಸುವ ಮುನ್ನ ಸಂಸ್ಥೆಯ ಸ್ವಯಂಸೇವಕರು " ಅನ್ನಪೂರ್ಣೇ ಸದಾಪೂರ್ಣೇ.." ಎಂದು ಅನ್ನಪೂರ್ಣೆಗೆ ವಂದಿಸಿ ಶಾಂತಿಮಂತ್ರಗಳನ್ನು ಗಟ್ಟಿಯಾಗಿ ಹೇಳುತ್ತಾರೆ; ಎಲ್ಲರೂ ಅದನ್ನು ಪುನರುಚ್ಚರಿಸುತ್ತಾರೆ. ನಂತರ ಸಂಸ್ಥೆಯ ಸ್ವಯಂಸೇವಕರು ಅಹಾರವನ್ನು ವಿತರಿಸುತ್ತಾರೆ. ಅದಮ್ಯ ಚೇತನ ಸಂಸ್ಥೆಯ ಪ್ಲೇಟ್ ಬ್ಯಾಂಕ್ ಒದಗಿಸಿದ ಪ್ಲೇಟುಗಳಲ್ಲಿ ಆಹಾರವನ್ನು ಬಡಿಸಲಾಗುತ್ತದೆ. ಇಲ್ಲಿ ಯಾವುದೇ ತರದ ಪ್ಲಾಸ್ಟಿಕ್ ಬಳಕೆ ನಿಷೇಧ. ಯಾರೂ ಆಹಾರವನ್ನು ತಟ್ಟೆಯಲ್ಲಿ ಉಳಿಸಿ ಹಾಳು ಮಾಡುವಂತಿಲ್ಲ. ತಾವು ಬಳಸಿದ ಪ್ಲೇಟುಗಳನ್ನು ತಾವೇ ತೊಳೆದು ಹಿಂದಿರುಗಿಸಬೇಕು. ಕುಡಿಯಲು ಶುದ್ಧ ನೀರು ಒದಗಿಸಲಾಗುತ್ತದೆ. ಕೈತೊಳೆಯಲು ಮತ್ತು ಪ್ಲೇಟುಗಳನ್ನು ತೊಳೆಯಲೂ ನೀರಿನ ವ್ಯವಸ್ಥೆ ಮಾಡಲಾಗಿರುತ್ತದೆ. ಇದು ಪ್ರತಿನಿತ್ಯದ ದಿನಚರಿ. ಇಂತಹ ದೈವಿಕ ಕಾರ್ಯಕ್ಕೆ ಪೋಲೀಸ್ ಇಲಾಖೆಯ ಹೊಯ್ಸಳ ವಿಭಾಗವು ರಕ್ಷಣೆ ಒದಗಿಸುವ ಮೂಲಕ ಕೈಜೋಡಿಸಿದೆ.

**ಯೋಜನೆಯ ಮಹತ್ತು, ಬೃಹತ್ತು**

ಸರತಿಯ ಸಾಲಿನಲ್ಲಿ ಕಾದಿರುವ ಒಬ್ಬೊಬ್ಬರನ್ನು ಮಾತನಾಡಿಸಿದರೂ ಜೀವನದ ಅಸಹಾಯಕತೆಯ ಚಿತ್ರ ಬಿಚ್ಚಿಕೊಳ್ಳುತ್ತದೆ. ಪ್ರತಿಯೊಬ್ಬರದೂ ಅದೇ ಗೋಳು; ಸನ್ನಿವೇಶಗಳು ಮಾತ್ರ ಬೇರೆ ಬೇರೆ. ಮನೆಯಿಂದ ಪರಿತ್ಯಕ್ತರಾದ ವೃದ್ಧರು, ಕೆಲಸವಿಲ್ಲದೆ ಅಸಹಾಯಕರಾಗಿರುವ ಕೂಲಿ ಕಾರ್ಮಿಕರು, ಕೊರೋನಾ ಮಹಾಮಾರಿಯ ದೆಸೆಯಿಂದ ಉದ್ಯೋಗ ಕಳೆದುಕೊಂಡವರು, ಅಲ್ಪಸ್ವಲ್ಪ ಗಳಿಕೆಯಿದ್ದರೂ ಸಂಸಾರ ತೂಗಿಸಲು ಸಾಧ್ಯವಾಗದ ಬಡವರು, ಸರಕಾರಿ ಶಾಲೆಯ ವಿದ್ಯಾರ್ಥಿಗಳು, ರಿಕ್ಷಾಚಾಲಕರು, ಸೊಪ್ಪು ತರಕಾರಿಗಳ ತಳ್ಳುಗಾಡಿ ವ್ಯಾಪಾರಸ್ಥರು, ಹೂ ಕಟ್ಟುವವರು, ಭಿಕ್ಷುಕರು ಎಲ್ಲರೂ ಒಂದೇ ಸರತಿಯ ಸಾಲಿನಲ್ಲಿ ನಿಂತಿರುವುದನ್ನು ನೋಡುವಾಗ ಕಣ್ಣೀರು ಜಿನುಗುತ್ತದೆ. ಹೊಟ್ಟೆತುಂಬ ತಿಂದ ತೃಪ್ತಿಯನ್ನು ಸೂಸುವ ಅವರ ಕಣ್ಣುಗಳನ್ನು ನೋಡುವಾಗ ನಮ್ಮ ಹೃದಯ ತುಂಬಿ ಬರುತ್ತದೆ. ಜೀವನದಲ್ಲಿ ಒಂದು ಕ್ಷಣದ ಸಾರ್ಥಕ್ಯದ ಭಾವ ಮೂಡುತ್ತದೆ.

ಮಾನವ ಇತಿಹಾಸದಲ್ಲಿಯೇ ದಾರುಣವಾದ ಮಹಾಮಾರಿ ಕೊರೋನಾ ದೇಶವನ್ನು ಅಪ್ಪಳಿಸಿದಾಗ ಬಡಜನರು ತತ್ತರಿಸಿಹೋದರು. ಇಡೀ ದೇಶ ಲಾಕ್ಡೌನ್ ಸುಳಿಯಲ್ಲಿ ಸಿಲುಕಿ ಕೂಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಕೊಳೆಗೇರಿ ನಿವಾಸಿಗಳು, ದೇವಾಲಯಗಳ ಅರ್ಚಕರು, ಆಟೋ ಚಾಲಕರು, ಕಾರ್ಪೊರೇಷನ್ ಕಾರ್ಮಿಕರು, ವಲಸೆ ಕಾರ್ಮಿಕರು ಮುಂತಾದವರಿಗೆ ಜೀವನವೇ ದುಸ್ತರವಾಯಿತು. ಬೆಂಗಳೂರಿನಲ್ಲಿ ಬದುಕುವುದೇ ಕಷ್ಟವಾಗಿ ತಮ್ಮ ಊರನ್ನು ಸೇರಿಕೊಳ್ಳಲು ಕಾಲ್ನಡಿಗೆಯಲ್ಲಿಯೇ ನೂರಾರು ಮೈಲಿ ಸಾಗುತ್ತಿದ್ದವರ ಕಥೆ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿತ್ತು. ಸಂದರ್ಭದ ಗಂಭೀರತೆಯನ್ನು ಮನಗಂಡ ಶ್ರೀಮತಿ ತೇಜಸ್ವಿನಿ ಅನಂತಕುಮಾರ ಅವರು ಅದಮ್ಯ ಚೇತನದ ಅಡುಗೆಮನೆಯನ್ನು ಸಕ್ರಿಯವಾಗಿರಿಸಿ ರೈಲು, ಬಸ್ಸು ನಿಲ್ದಾಣಗಳಲ್ಲಿ ದಾರಿಗಾಣದೆ ಸಿಕ್ಕಿಬಿದ್ದಿದ್ದ ಸಾವಿರಾರು ಜನರಿಗೆ ಸಿದ್ಧಪಡಿಸಿದ ಆಹಾರವನ್ನು ಒದಗಿಸಿದರು. ಜೊತೆಗೆ ನಗರದ ಮೂಲೆ ಮೂಲೆಗಳಲ್ಲಿ ಉಳಿದುಕೊಂಡಿದ್ದ ಅಸಹಾಯಕ ಬಡವರಿಗೆ ಸ್ವಯಂಸೇವಕರ ಹಾಗೂ ದಾನಿಗಳ ನೆರವಿನಿಂದ ಆಹಾರದ ಪೊಟ್ಟಣಗಳನ್ನು ವಿತರಿಸಲು ಪ್ರಾರಂಭಮಾಡಿದರು.

ಲಾಕ್ಡೌನ್ ತೆರವುಗೊಂಡ ಮೇಲೂ ಜನರ ಬವಣೆಯೇನೂ ಕಡಿಮೆಯಾಗಲಿಲ್ಲ. ಇದನ್ನು ಮನಗಂಡ ಜೆಪಿನಗರದ ಮಾರೇನಹಳ್ಳಿಯ ನಂದಿನಿ,

ಪುಟ 6 ರಲ್ಲಿ ಮುಂದುವರೆದಿದೆ

ನಾನು ಸುಮಾರು ಪ್ರತಿದಿನವೂ ಕಲಾಜ್ಯೋತಿ ಕಟ್ಟೆಯಲ್ಲಿ ನಡೆಯುವ ಅನ್ನದಾನಕ್ಕೆ ಸಹಾಯ ಮಾಡಲು ಬರುತ್ತಿದ್ದೇನೆ. ಇಲ್ಲಿ ಬರುವವರೆಲ್ಲರೂ ಕಡು ಬಡವರೇ. ಸುತ್ತಮುತ್ತ ಇರುವ ಕೊಳೇಗೇರಿಗಳ ಜನರು ಇಂದಿಗೂ ಬವಣೆ ಪಡುತ್ತಿದ್ದಾರೆ. ಅವರಿಗೆ ಇಂದು ವರ್ಷದ ಎಲ್ಲ ದಿನಗಳಲ್ಲಿಯೂ ಒಂದು ಹೊತ್ತಿನ ಊಟ ದೊರೆಯುತ್ತಿದೆ. ತೀರ ಅಸಹಾಯಕರು, ಅಂಗವಿಕಲರು, ಅನಾಥರು ಬಂದರೆ ಅವರಿಗೆ ರಾತ್ರಿಯ ಭೋಜನಕ್ಕಾಗಿ ಕಟ್ಟಿಕೊಂಡು ಹೋಗಲೂ ಅವಕಾಶ ನೀಡುತ್ತೇವೆ. ಎಷ್ಟೇ ಜನ ಬಂದರೂ ಯಾರಿಗೂ ಇಲ್ಲವೆಂದುದಿಲ್ಲ.



**-ಎನ್ ಪ್ರಕಾಶ್** (ನಿವೃತ್ತ ಬೆಮೆಲ್ ಉದ್ಯೋಗಿ)
ಸ್ವಯಂಸೇವಾ ಕಾರ್ಯಕರ್ತರು.

ಗವಿಪುರದ ಕಲಾಜ್ಯೋತಿ ಕಟ್ಟೆಯಲ್ಲಿ ಪ್ರತಿದಿನವೂ ಉತ್ತಮ ಗುಣ ಮಟ್ಟದ ಪೌಷ್ಟಿಕ ಆಹಾರವನ್ನು ವಿತರಿಸುತ್ತಿದ್ದೇವೆ. ಶುದ್ಧ ಕುಡಿಯುವ ನೀರು ಒದಗಿಸುತ್ತಿದ್ದೇವೆ. ವಿತರಣೆ ಮಾಡಲು ಪ್ರತಿಯೊಂದು ಕಡೆಯೂ ನಾಲ್ವರು ಸ್ವಯಂಸೇವಕರಿರುತ್ತಾರೆ. ಮೊದಲಿಗೆ ಅದಮ್ಯ ಚೇತನ ಸಂಸ್ಥೆಯೇ ಪ್ರಾರಂಭಿಸಿದ ಈ ಯೋಜನೆಯ ಪ್ರಾಯೋಜಕತ್ವ ವಹಿಸಲು ಇಂದು ದಾನಿಗಳು ತಾವಾಗಿಯೇ ಮುಂದೆ ಬರುತ್ತಿದ್ದಾರೆ. ಸಂಸ್ಥೆಗೆ ತಗಲುವ ವೆಚ್ಚವನ್ನು ಪರಿಗಣಿಸದೆ ಕೇವಲ ಸಾಂಕೇತಿಕ ವೆಚ್ಚವನ್ನು ಮಾತ್ರ ದಾನಿಗಳಿಂದ ಸ್ವೀಕರಿಸಲಾಗುತ್ತಿದೆ.



**- ಲಕ್ಷ್ಮೀ ಎಸ್.**
ಮೇಲ್ವಿಚಾರಕರು, ಅದಮ್ಯ ಚೇತನ

# ಚಾಣಾಕ್ಷತೆಯನ್ನು ಮೆರೆದು ಮಿರುಗಿದ ರಾಜಕೀಯ ಧ್ರುವ ನಕ್ಷತ್ರ

**ನಾನು ಕಂಡಂತೆ**



**ಅನಂತಕುಮಾರ್**

ಬಾಬು ಕೃಷ್ಣಮೂರ್ತಿ



೧೯೭೫ ನವೆಂಬರ್ ತಿಂಗಳು. ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಲಾಗಿದ್ದ ದಿನಗಳು. ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಲೋಕ ಸಂಘರ್ಷ ಸಮಿತಿ ಎಂಬ ವೇದಿಕೆ ರೂಪುಗೊಂಡು ತುರ್ತು ಪರಿಸ್ಥಿತಿಯ ವಿರುದ್ಧ ಸತ್ಯಾಗ್ರಹ ಆರಂಭಿಸಿದ್ದ ಸಮಯ. ಸಮಾಜದ ಎಲ್ಲ ವರ್ಗ ಹಾಗೂ ಶ್ರೇಣಿಗಳ ಜನರೂ ಸತ್ಯಾಗ್ರಹದಲ್ಲಿ ಭಾಗವಹಿಸಬೇಕೆಂಬುದು ಲೋಕ ಸಂಘರ್ಷ ಸಮಿತಿಯ ಆಶಯ. ತುರ್ತು ಪರಿಸ್ಥಿತಿ ಘೋಷಣೆಯಾದಾಗಿನಿಂದಲೇ ಭೂಗತನಾಗಿದ್ದ ನನಗೆ ಕರ್ನಾಟಕದ ಕೆಲವು ವಿದ್ಯಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿ ಸತ್ಯಾಗ್ರಹಕ್ಕೆ ಕಳಿಸುವ ಕೆಲಸ ವಹಿಸಲಾಗಿತ್ತು.

ಹುಬ್ಬಳ್ಳಿಯಲ್ಲಿ ಅಂಥ ಒಂದು ವಿದ್ಯಾರ್ಥಿಗಳ ರಹಸ್ಯ ಬೈಠಕ್. ಎಂಟು ಹತ್ತು ವಿದ್ಯಾರ್ಥಿಗಳಿದ್ದಿರಬಹುದು. ತುರ್ತು ಪರಿಸ್ಥಿತಿ ಹಿನ್ನೆಲೆ ವಿವರಿಸಿ, ವಿದ್ಯಾರ್ಥಿಗಳ ಕರ್ತವ್ಯ ನೆನಪಿಸಿ ಅವರು ಮರುದಿನ ನಿಶ್ಚಿತ ಸ್ಥಳದಲ್ಲಿ ನಿಶ್ಚಿತ ಸಮಯದಲ್ಲಿ ಸತ್ಯಾಗ್ರಹ ಮಾಡುವಂತೆ ಮಾನಸಿಕವಾಗಿ ಸಜ್ಜುಗೊಳಿಸಿದ್ದೆ. ಆ ಬೈಠಕ್ಕಿನಲ್ಲಿ ನನ್ನ ವಿಶೇಷ ಗಮನ ಸೆಳೆದ ೧೫-೧೬ ವಯಸ್ಸಿನ ಕಿಶೋರನೊಬ್ಬನಿದ್ದ. ಆಕರ್ಷಕ ವ್ಯಕ್ತಿತ್ವದ ಆ ಉತ್ಸಾಹಿ ಕಿಶೋರನ ನೆನಪು ನನ್ನ ಮನಸ್ಸಿನ ಮೂಲೆಯೊಂದರಲ್ಲಿ ದಾಖಲಾಗಿತ್ತು.

೨೦೦೫ ಅಥವಾ ೨೦೦೬ ನವೆಂಬರ್ ತಿಂಗಳು. ಬೆಂಗಳೂರು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿನ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಒಂದಕ್ಕೆ ಮುಖ್ಯ ಅತಿಥಿಯಾಗಿ ಹೋಗಿದ್ದೆ. ಕೇಂದ್ರ ಸಚಿವರೂ ಆ ಕ್ಷೇತ್ರದ ಲೋಕಸಭಾ ಸದಸ್ಯರೂ ಆದ ಎಚ್.ಎನ್. ಅನಂತ ಕುಮಾರ್ ಕೂಡ ಅಂದಿನ ಮುಖ್ಯ ಅತಿಥಿಗಳು. ಕಾರ್ಯಕ್ರಮಕ್ಕೂ ಸ್ವಲ್ಪ ಮೊದಲೇ ಬಂದಿದ್ದ ಅವರೂ ನಾನೂ ಪಕ್ಕ ಪಕ್ಕದಲ್ಲೇ ಕುಳಿತಿದ್ದೆವು. ನನ್ನ ಮನಸ್ಸಿನಲ್ಲಿದ್ದ ಒಂದು ಸಂದೇಹವನ್ನು ಪರಿಹರಿಸಿಕೊಳ್ಳಲು ಅವರನ್ನು ಕೇಳಿದ್ದೆ, " ಅನಂತ ಕುಮಾರ್, ತುರ್ತು ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಒಂದು ಗುಪ್ತ ಸಭೆಯನ್ನು ನಾನು ತೆಗೆದುಕೊಂಡಿದ್ದೆ. ಅವರನ್ನು ಸತ್ಯಾಗ್ರಹಕ್ಕೆ ಸಜ್ಜುಗೊಳಿಸುವ ಸಲುವಾಗಿ ಯೋಜಿಸಿದ್ದ ಸಭೆ. ನಿಮ್ಮನ್ನು ನೋಡಿದಾಗಲೆಲ್ಲ ಆ ಸಭೆಯಲ್ಲಿ ನೀವೂ ಇದ್ದಿರೇನೋ ಎಂಬ ಅನುಮಾನ......" ಅವರೇ ಮಧ್ಯೆ ಬಾಯಿ ಹಾಕಿ, "ಹೌದು. ಆ ಬೈಠಕ್ಕಿನಲ್ಲಿ ನಾನೂ ಇದ್ದೆ. ಆನಂತರ ಸತ್ಯಾಗ್ರಹದಲ್ಲಿ ಭಾಗವಹಿಸಿದೆ. ನಲವತ್ತುದಿನಗಳ ಜೈಲುವಾಸವನ್ನೂ ಅನುಭವಿಸಿದೆ. ನೀವು ಬೈಠಕ್ ತೆಗೆದುಕೊಂಡಿದ್ದು ಚೆನ್ನಾಗಿ ನೆನಪಿದೆ" ಎಂದು ನನ್ನ ಅನುಮಾನ ಪರಿಹರಿಸಿದರು.

ಅಂದಿನ ಸಭೆಯಲ್ಲಿ ಮಾತನಾಡುವಾಗ ಪ್ರಧಾನಿಯಾಗಲು ಬೇಕಾಗುವ ಸಕಲ ಗುಣಲಕ್ಷಣಗಳನ್ನೂ ವಯಸ್ಸು ಹಾಗೂ ಸಾಮರ್ಥ್ಯಗಳನ್ನೂ ಹೊಂದಿರುವ ಅನಂತ ಕುಮಾರ್ ಪ್ರೈಮ್ ಮಿನಿಸ್ಟೀರಿಯಲ್ ಮೆಟೀರಿಯಲ್ ಎಂದು ಹೇಳಿದ್ದೆ. ಅದು ನನ್ನ ವೈಯಕ್ತಿಕ ಅನಿಸಿಕೆ. ಅದನ್ನು ಕೇಳಿ ನನ್ನನ್ನು ಬಹಳ ಎತ್ತರಕ್ಕೆ ಏರಿಸಿಬಿಟ್ಟಿರಿ ಎಂದಿದ್ದರು. ಅದೇನು ಉತ್ಪ್ರೇಕ್ಷೆಯ ಮಾತಲ್ಲ. ಅಸಾಧ್ಯವಾದುದೂ ಅಲ್ಲ ಎಂದಿದ್ದೆ ನಾನು.

೨೦೧೮ರ ಫೆಬ್ರವರಿ ೨೫. ಅವರೊಡನೆ ಕೊನೆಯ ಬಾರಿ ಸ್ವಲ್ಪ ಸಮಯ ಕಳೆದ ಸಂದರ್ಭ. ನನ್ನ ಅಣ್ಣನವರ ಮೊಮ್ಮಗನ ಮದುವೆಗೆ ಅವರೂ ಬಂದಿದ್ದರು. ಅವರ ಬಂಧು ವರ್ಗದವರೂ ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದ ಮದುವೆ. ಇಡೀ ಕಲ್ಯಾಣ ಮಂಟಪದಲ್ಲಿ ಮಿಂಚಿನಂತೆ ಸಂಚರಿಸುತ್ತಾ, ಎಲ್ಲರನ್ನೂ ಮಾತನಾಡಿಸುತ್ತಾ ತಮ್ಮ ಉಪಸ್ಥಿತಿಯ ಮೂಲಕ ವಾತಾವರಣದಲ್ಲಿ ಸಂಚಲನ ಉಂಟುಮಾಡಿದ್ದ ಅನಂತ ಕುಮಾರ್ ಅವರನ್ನು ಕೆಲವರು ಬಂಧುಗಳು ಸುತ್ತುವರಿದಿದ್ದ ಕಡೆಗೆ ಹೋದೆ. 'ಬನ್ನಿ ಬಾಬುಕೃಷ್ಣಮೂರ್ತಿಗಳೇ' ಎಂದು ಹೇಳಿ ಅಲ್ಲಿ ನೆರೆದಿದ್ದವರಿಗೆ ಅವರು ಹೇಳಿದ ಮೂರು ನಾಲ್ಕು ಮಾತುಗಳು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ. " ಇವರು ಬರೆದ ಅಜೇಯ ಓದಿದೆ. ಜೈಲಿಗೆ ಹೋದೆ. ಸೆಂಟ್ರಲ್ ಮಿನಿಸ್ಟರ್ ಆದೆ! " ಸೂತ್ರರೂಪದಲ್ಲಿ ಅವರು ಹೇಳಿದ ಈ ಮಾತುಗಳು ನನ್ನಲ್ಲಿ ನವಿರಾದ ರೋಮಾಂಚನ ಉಂಟುಮಾಡಿತ್ತು. ಅದೇ ವೇಳೆ ಮೊದಲ ಭೇಟಿಯಲ್ಲಿ ಶ್ರೀಮತಿ ತೇಜಸ್ವಿನಿಯವರು ಭಾವಭರಿತರಾಗಿ ಹೇಳಿದ ಮಾತು ನೆನಪಿಗೆ ಬಂತು: " ನಿಮ್ಮ ಅಜೇಯದ ಮೂಲಕ ಅನಂತ ಕುಮಾರ್ ಮತ್ತು ನನ್ನ ಮಧ್ಯೆ ಸ್ನೇಹಾಂಕುರವಾಗಿ ಅದು ವಿವಾಹದ ಹಂತ ತಲಪಿತು." ಅನಂತ್ ಮತ್ತು ತೇಜಸ್ವಿನಿ ದಂಪತಿಯ ಎಲ್ಲ ಕಾಲದ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾದ ನಾನು ಧನ್ಯ.

ನಾನು ಭಾರತೀಯ ಜನತಾ ಪಾರ್ಟಿ ಮತ್ತು ಅದರ ಹಿಂದಿನ ಅವತಾರ ಭಾರತೀಯ ಜನಸಂಘದ ಆರಂಭದ ದೆಸೆಯಿಂದಲೂ ಸಾಕ್ಷಿಯಾಗಿ, ಪ್ರತ್ಯಕ್ಷದರ್ಶಿಯಾಗಿ ಬೆಳೆದು ಬಂದವನು. ಅವುಗಳ ಬಹುಪಾಲು ಅಂತರಂಗ ಬಹಿರಂಗಗಳನ್ನು ಬಲ್ಲವನು. ಜಗನ್ನಾಥರಾವ್ ಜೋಷಿ, ಭಾವೂರಾವ್ ದೇಶಪಾಂಡೆ, ವರದರಾಜ ಶ್ರೇಷ್ಠಿ ಮುಂತಾದ ಅಂದಿನ ನಾಯಕರ ಸಾಮೀಪ್ಯದ ಸವಿ ಉಂಡವನು. ಅಂಥ ಕಡು ಕಷ್ಟದ, ಸವಾಲಿನ ದಿನಗಳನ್ನು ಕಂಡಿರುವ ನಾನು ಆ ಪರಂಪರೆಯ ಪ್ರತಿನಿಧಿಗಳಾದ ಅಟಲ್ ಜೀ, ಮೋದಿಯವರು ಪ್ರಧಾನಿಗಳಾಗಿ ಭಾರತದ ಚುಕ್ಕಾಣಿ ಹಿಡಿಯುವಂತಾದ ದಿನಗಳನ್ನು ನೋಡುವ ಭಾಗ್ಯ ಪಡೆದವನು.

ನನ್ನ ಪ್ರಕಾರ ಕರ್ನಾಟಕದಲ್ಲಿ, ಅಷ್ಟೇ ಏಕೆ ಇಡೀ ದಕ್ಷಿಣ ಭಾರತದಲ್ಲಿ, ಆ ಪರಂಪರೆಯ ಸುವರ್ಣ ಕ್ಷಣಗಳು ಆರಂಭಗೊಂಡಿದ್ದೇ ಅನಂತ ಕುಮಾರ್ ಮತ್ತು ಯಡಿಯೂರಪ್ಪನವರ ಜೋಡಿ ಚುಕ್ಕಾಣಿ ಹಿಡಿದಾಗ. ಒಬ್ಬರು ಇಡೀ ಸಂಘಟನೆಯನ್ನು ಗಟ್ಟಿಯಾದ ತಳಹದಿಯ ಮೇಲೆ ಕಟ್ಟಿ ನಿಲ್ಲಿಸಿದರೆ , ಇನ್ನೊಬ್ಬರು ಆವರೆಗೂ ಆ ಪಕ್ಷದಿಂದ ದೂರವೇ ಇದ್ದ ರೈತ ಸಮುದಾಯವನ್ನು ಪಕ್ಷದ ಬಳಿಗೆ ತಂದವರು. ಈ ಇಬ್ಬರ ಅಹರ್ನಿಶಿ ಪ್ರಯತ್ನದಿಂದ ಅವರ ಪಕ್ಷ ಮುಂಚೂಣಿಗೆ ಬಂದು ಕರ್ನಾಟಕದಲ್ಲಿ ಸರ್ಕಾರ ಸ್ಥಾಪಿಸುವಂತಾಯಿತು. ಆ ಪಕ್ಷಕ್ಕೆ ದಕ್ಷಿಣದ ದ್ವಾರ ತೆರೆದುಕೊಂಡಿತು.

ಅನಂತ ಕುಮಾರ್ ಮಧ್ಯಮ ವರ್ಗದ ಸಂಪ್ರದಾಯಸ್ಥ ಕುಟುಂಬದಿಂದ ಚಿಮ್ಮಿ ಬಂದು ಗೌರಿ ಶಂಕರದಂತೆ ರಾಷ್ಟ್ರಮಟ್ಟದಲ್ಲಿ ಎತ್ತರಕ್ಕೆ ಬೆಳೆದು ನಿಂತವರು. ಅವರು ಜನಿಸಿದ ಬ್ರಾಹ್ಮಣ ಉಪಪಂಗಡವು ನಾಡಿಗೆ ಅನೇಕ ಪ್ರತಿಭಾ ಸಂಪನ್ನರನ್ನು ನೀಡಿದೆ. ಸರ್ ಎಂ. ವಿಶ್ವೇಶ್ವರಯ್ಯರಂಥ ಮಹಾ ಮೇಧಾವಿ ಆಡಳಿತಗಾರರನ್ನು ನೀಡಿದೆ. ಇಂದಿಗೂ ಅವರು ಒಂದು ಐಕಾನ್ ಆಗಿದ್ದಾರೆ. ಸರ್.ಎಂ.ವಿ.ಯವರ ಬಗ್ಗೆ ಅಪಾರ ಪೂಜ್ಯ ಭಾವನೆಯನ್ನು ಹೊಂದಿರುವ ನಾನು ನಿಷ್ಪಕ್ಷಪಾತವಾಗಿ ಹೇಳಬೇಕಾದರೆ ಅನಂತ ಕುಮಾರ್ ಹಲವು ಹತ್ತು ವಿರೋಧಗಳನ್ನು ಎದುರಿಸಿ ಇಡೀ ರಾಷ್ಟ್ರಕ್ಕೆ ಸರ್. ಎಂ. ವಿಯವರಿಗಿಂತಲೂ ಹೆಚ್ಚಿನ ಕೊಡುಗೆ ನೀಡಿರುವರೆನ್ನಬೇಕು. ಸರ್.ಎಂ.ವಿಯವರು ದಿವಾನರಾಗಿ ಮೈಸೂರು ಸಂಸ್ಥಾನಕ್ಕೆ ಮತ್ತು ಇನ್ನು ಕೆಲವು ಸಂಸ್ಥಾನಗಳಿಗೆ ಪ್ರಗತಿಯ ಪಥವನ್ನು ತೋರಿದರೆ ಅನಂತ್ ಕ್ಷೇತ್ರ ವಿಶಾಲವಾಗಿತ್ತು. ಸೇವೆ ಅಪಾರವಾಗಿತ್ತು. ಹಾಗೂ ಪ್ರಜಾಪ್ರಭುತ್ವ ಮಾರ್ಗದಲ್ಲಿ ಅನಂತ್ ಬೆಳೆದ ಪರಿ ಒಂದು ಅದ್ಭುತವೆನ್ನಬೇಕು.

ದೇಶದಲ್ಲಿ ಭಾರಿ ಚಳವಳಿಗಳಾದ ಮೇಲೆ ಅವುಗಳಿಂದ ಹೊಸ ನಾಯಕತ್ವ ಹುಟ್ಟಿಕೊಳ್ಳುತ್ತದೆ. ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯ ಅನಂತರ ಒಂದು ಹೊಸ ನಾಯಕತ್ವ ದೇಶದಲ್ಲಿ ಮೂಡಿ ಬಂತು. ಅಂತೆಯೇ ತುರ್ತು ಪರಿಸ್ಥಿತಿಯ ಹೋರಾಟದ ಅನಂತರ ದೇಶದಲ್ಲಿ ಇನ್ನೊಂದು ನಾಯಕತ್ವ ಹೊರಹೊಮ್ಮಿತು. ಅಂಥ ನಾಯಕರು ನರೇಂದ್ರ ಮೋದಿ, ಅನಂತ ಕುಮಾರ್, ವೆಂಕಯ್ಯನಾಯ್ಡು ಹಾಗೂ ವಿಶಾಲ ಭಾರತದಲ್ಲಿ ಹಬ್ಬಿರುವ ಸಹಸ್ರ ಸಹಸ್ರ ಇಂದಿನ ನಾಯಕರು.

ಆರು ದಶಕಗಳ ಸಾರ್ಥಕ, ಅರ್ಥಪೂರ್ಣ ಜೀವನ ನಡೆಸಿದ ಅನಂತ ಕುಮಾರ್ ಪೂರ್ಣ ಹೆಸರು ಹೆಗ್ಗನಹಳ್ಳಿ ನಾರಾಯಣಶಾಸ್ತ್ರಿ ಅನಂತ ಕುಮಾರ್. ಜನಿಸಿದ್ದು ೧೯೫೯ರ ಜುಲೈ ೨೨ರಂದು. ಬೆಂಗಳೂರಿನಲ್ಲಿ. ಶಿಸ್ತು, ಸಮಾಧಾನ, ಲೌಕಿಕ ನಿರ್ಲಿಪ್ತತೆಗಳ ಸಾತ್ವಿಕ ಜೀವನ ನಡೆಸಿದ ತಂದೆ ನಾರಾಯಣ ಶಾಸ್ತ್ರಿಗಳು ಮೌನವಾಗಿಯೇ ತಮ್ಮ ಮಗನ ಪುರೋಭಿವೃದ್ಧಿಯನ್ನು ಕಂಡು ಸಂತಸ ಪಟ್ಟ ರೈಲ್ವೆ ಉದ್ಯೋಗಿ. ಜೊತೆಗೆ ವ್ಯಾಯಾಮ ಪಟು. ಕುಸ್ತಿಯ ಕಲಿ. ತಾಯಿ ಗಿರಿಜಾ ಶಾಸ್ತ್ರಿ ಸ್ವಭಾವತಃ ಸಾಮಾಜಿಕ ಕಳಕಳಿಯ ಕ್ರಿಯಾಶೀಲ ಮಹಿಳೆ. ಅಂದಿನ ಭಾರತೀಯ ಜನಸಂಘದ ಕಾರ್ಯಕರ್ತೆಯಾಗಿ ದುಡಿದು ಸ್ವಸಾಮರ್ಥ್ಯದಿಂದ ಹುಬ್ಬಳ್ಳಿ ಧಾರವಾಡ ನಗರಸಭೆಯ ಸದಸ್ಯೆಯಾಗಿ ಆಯ್ಕೆಗೊಂಡು ಡೆಪ್ಯುಟಿ ಮೇಯರ್ ಸ್ಥಾನವನ್ನಲಂಕರಿಸಿದವರು.

ಈ ಹಿನ್ನೆಲೆಯ ಅನಂತ್ ಅವರಿಗೆ ತಾಯಿಯ ಸಾಮಾಜಿಕ ಕಳಕಳಿ, ತಂದೆಯವರ ಆಧ್ಯಾತ್ಮಿಕ ಪ್ರವೃತ್ತಿ ಮೈಗೂಡಿದ್ದವು. ಸಾಮಾಜಿಕ, ರಾಜಕೀಯ ಹಾಗೂ ಇತರೇ ಅನೇಕ ಕಾರ್ಯಕ್ರಮಗಳ ಮಹಾಪೂರವೇ ಇದ್ದರೂ ಯೋಗ, ವ್ಯಾಯಾಮ, ಧ್ಯಾನ ಮುಂತಾದ ಚಟುವಟಿಕೆಗಳು ತಪ್ಪುತ್ತಿರಲಿಲ್ಲ. ಅವೇ ಅವರ ಅಗಾಧ ಅಂತಃಶಕ್ತಿಗೆ ಮೂಲ ಸ್ರೋತಗಳಾಗಿದ್ದವು. ಭಗವದ್ಗೀತೆ ಮತ್ತು ಶಂಕರ ಭಗವತ್ಪಾದರ ಸಿದ್ಧಾಂತಗಳು ಅವರ ಜೀವನದ ಇಂಧನವಾಗಿದ್ದವು. ಶೃಂಗೇರಿಯ ಜಗದ್ಗುರುಗಳ ಪರಿಪೂರ್ಣ ಆಶೀರ್ವಾದದ ಬಲವೂ ಅವರ ಬೆನ್ನಿಗಿತ್ತು. ಇನ್ನು ಅಸಂಖ್ಯ ಮಠಾಧೀಶರ, ಸಾಧು ಸಂತರ, ಅವಧೂತರ ಅನುಗ್ರಹವೂ ಅವರಿಗೆ ದೊರೆತಿತ್ತು. ಇಷ್ಟೆಲ್ಲ ಶಕ್ತಿಗಳಿಂದ ಕೂಡಿದ್ದ ಅನಂತ್ ದಣಿವರಿಯದ ನಾಯಕನಾಗಿ ಅಹರ್ನಿಶಿ ದುಡಿದಿದ್ದು ಸಹಜವೇ ಆಗಿತ್ತು.

ಪುಟ 4 ರಲ್ಲಿ ಮುಂದುವರೆದಿದೆ

## "ನಮ್ಮ ಮೆಟ್ರೋ" – ಅನಂತ ಪರಿಶ್ರಮದ ಸಾಧನೆ

ಪುಟ 1 ರಿಂದ

ಅರ್ಹ ಎಂಬ ಬದಲಾವಣೆಯನ್ನು ಒಳಗೊಂಡಿದ್ದ ಈ ಪ್ರಸ್ತಾವಕ್ಕೆ ಕೇಂದ್ರದ ಅನುಮೋದನೆ ಪಡೆದುಕೊಂಡರು. ಇದರ ಫಲವಾಗಿ ಮುಂಬೈ, ಬೆಂಗಳೂರು, ಕೊಚ್ಚಿ, ಲಕ್ನೋ ಮೊದಲಾದ ನಗರಗಳು ಮೆಟ್ರೋ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಹವೆನಿಸುವಂತಾಯಿತು. ಅನಂತಕುಮಾರರ ಪ್ರಯತ್ನದ ಫಲವಾಗಿ 2003 ರಲ್ಲಿ ವಾಜಪೇಯಿ ನೇತೃತ್ವದ ಸಚಿವ ಸಂಪುಟವು ಅನಂತಕುಮಾರರು ಪ್ರಸ್ತಾಪಿಸಿದ ಮೆಟ್ರೋ ರೈಲು ಯೋಜನೆಯನ್ನು ಕಾರ್ಯಗತಗೊಳಿಸಲು ಬೆಂಗಳೂರು, ಅಹಮದಾಬಾದ್ ಮತ್ತು ಹೈದರಾಬಾದ್ ನಗರಗಳಲ್ಲಿ ವಿವರವಾದ ಯೋಜನಾ ವರದಿ (DPR) ಯನ್ನು ತಯಾರಿಸಲು ಅನುಮೋದನೆ ನೀಡಿತು. ಕೂಡಲೇ ಕಾರ್ಯಪ್ರವೃತ್ತರಾದ ಅನಂತಕುಮಾರರು ದೆಹಲಿ ಮೆಟ್ರೋ ಯಶೋಗಾಥೆಯ ರೂವಾರಿ ಶ್ರೀ ಈ. ಶ್ರೀಧರನ್ ರವರನ್ನು ಮೆಟ್ರೋ ಸಾರಿಗೆ ವ್ಯವಸ್ಥೆಯ ಸಲಹೆಗಾರರನ್ನಾಗಿ ಆಹ್ವಾನಿಸಿ ಈ ಯೋಜನೆಗೆ ಸಹಾಯ ಮಾಡುವಂತೆ ಒಪ್ಪಿಸಿದರು. ಅಲ್ಲಿಂದ ಮುಂದಿನದು ಇತಿಹಾಸ.

ಯಾವುದೇ ಒಂದು ಮಹತ್ವಾಕಾಂಕ್ಷೆಯ ಬೃಹತ್ ಯೋಜನೆ ಸಿದ್ಧವಾಗಬೇಕಾದರೆ ನಾಯಕತ್ವದ ಸಂಕಲ್ಪಶಕ್ತಿ ಅದರ ಜೊತೆಯಾಗಬೇಕು. ವಿಧಾನ ಸೌಧ ನಿರ್ಮಾಣದ ಹಂತದಲ್ಲಿ ಶ್ರೀ ಕೆಂಗಲ್ ಹನುಮಂತಯ್ಯನವರು ಅಂತಹ ನಾಯಕತ್ವ ನೀಡಿದ್ದರು. ನವ ಬೆಂಗಳೂರು ನಿರ್ಮಾಣಕ್ಕಾಗಿ ಅಂತಹದೇ ಸಂಕಲ್ಪ ಶಕ್ತಿ ಮತ್ತು ಕ್ರಿಯಾ ಶಕ್ತಿಗಳನ್ನು ಅನಂತಕುಮಾರರು ಪ್ರದರ್ಶಿಸಿದರು. ಅವರ ಸತತ ಮೇಲುಸ್ತುವಾರಿಯ ಫಲವಾಗಿ ನಮ್ಮ ಮೆಟ್ರೋ ಯೋಜನೆಯ ಪೂರ್ವ-ಪಶ್ಚಿಮ ಕಾರಿಡಾರ್ 29 ಏಪ್ರಿಲ್ ೨೦೧೬ರಂದು ಉದ್ಘಾಟನೆಗೊಂಡಿತು. ಇದಕ್ಕೆ ಮೊದಲು 20/10/2011 ರಂದು ಮಹಾತ್ಮಾಗಾಂಧಿ ರಸ್ತೆ ಮತ್ತು ಬೈಯಪ್ಪನಹಳ್ಳಿ ನಡುವಣ 6.7 ಕಿಮೀ ಉದ್ದದ ಕಾರಿಡಾರ್ ಪ್ರಯಾಣಿಕರಿಗೆ ಮುಕ್ತವಾಗಿತ್ತು.

ನಮ್ಮ ಮೆಟ್ರೋ ಯೋಜನೆಯ ಮೊದಲ ಹಂತದ ಕಾಮಗಾರಿಗೆ ತಗುಲಿದ ಅಂತಿಮ ವೆಚ್ಚ 14405 ಕೋಟಿ ರೂಪಾಯಿಗಳು. ಇದಕ್ಕೆ ಬೇಕಾದ ಹಣಕಾಸು ಕ್ರೋಡೀಕರಿಸಲೂ ಅನಂತಕುಮಾರರು ಅಪಾರ ಶ್ರಮ ವಹಿಸಿದರು. ತಾವು ಸಚಿವರಾಗಿದ್ದ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದ ಅಧೀನ ಸಂಸ್ಥೆ ಹುಡ್ಕೋದಿಂದ 600 ಕೋಟಿ ರೂಪಾಯಿಗಳನ್ನು ಕ್ಲುಪ್ತಕಾಲದಲ್ಲಿ ಬಿಡುಗಡೆ ಮಾಡಿಸಿದರು. ವಿವಿಧ ಬ್ಯಾಂಕುಗಳ, ವಿದೇಶೀ ಸಂಸ್ಥೆಗಳ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಆರ್ಥಿಕ ಸಹಾಯವು ಕಾಲಕಾಲಕ್ಕೆ ಹರಿದುಬರುವಂತೆ ಎಚ್ಚರಿಕೆ ವಹಿಸಿದರು.

ಮೊದಲ ಹಂತದ ಮೆಟ್ರೋ ಯೋಜನೆಯಲ್ಲಿ 8.8 ಕಿಲೋ ಮೀಟರ್ ಉದ್ದದ ಹಾದಿಯು ನೆಲದ ಒಳಗಡೆಯಿಂದ ಸಾಗುವ ಸುರಂಗ ಮಾರ್ಗವಾಗಿದೆ. ಇದು ಕಾಮಗಾರಿಯ ಅತ್ಯಂತ ಕಷ್ಟದ ಭಾಗವಾಗಿತ್ತು. ಜನನಿಬಿಡ, ವಾಣಿಜ್ಯ ವಲಯಗಳ ಅಡಿಯಿಂದ ಸಾಗಿಹೋಗುವ ಈ ಮಾರ್ಗದಲ್ಲಿ ಮೃದು ಮಣ್ಣು, ಕಠಿಣ ಗ್ರಾನೈಟ್ ಬಂಡೆಗಳು, ಮೇಲ್ಮಟ್ಟದಲ್ಲಿರುವ ಅಂತರ್ಜಲ, ಉದುರುವ ಚಿಕ್ಕಪುಟ್ಟ ಬಂಡೆಗಳು ಮುಂತಾದ ಅಡೆತಡೆಗಳು ಎದುರಾಗುತ್ತಿದ್ದವು. ಈ ಕಠಿಣ ಹಂತದಲ್ಲಿ ಅನಂತಕುಮಾರರು ನಿಯಮಿತವಾಗಿ ಸ್ಥಳಕ್ಕೆ ಭೇಟಿ ನೀಡಿ ಕಾರ್ಮಿಕರನ್ನು ಹುರಿದುಂಬಿಸುತ್ತಿದ್ದರು.



ಮೆಟ್ರೋ ನಿರ್ಮಾಣದ ಹಂತದಲ್ಲಿ ಸಾರ್ವಜನಿಕರು ಎದುರಿಸುವ ಕುಂದು ಕೊರತೆಗಳನ್ನು ನಿವಾರಿಸಲು ಮತ್ತು ಯೋಜನೆಯ ವೇಗವನ್ನು ಹೆಚ್ಚಿಸಲು ಯೋಜನೆಯ ವ್ಯವಸ್ಥಾಪಕ ನಿರ್ದೇಶಕರೊಂದಿಗೆ "ಮೆಟ್ರೋ ಸಂವಾದ" ಕಾರ್ಯಕ್ರಮವನ್ನು ಏರ್ಪಡಿಸಿದ್ದರು.

ಮೆಟ್ರೋ ಯೋಜನೆ ಇನ್ನೂ ಒಂದು ಕಾರಣಕ್ಕಾಗಿ ಮಹತ್ವ ಪಡೆದುಕೊಳ್ಳುತ್ತದೆ. ಅನಂತಕುಮಾರ್ ಮೊದಲಿನಿಂದಲೂ ಪರಿಸರದ ಬಗ್ಗೆ ಅಪಾರ ಕಾಳಜಿಯುಳ್ಳವರು. ಪೆಟ್ರೋಲ್ ಡೀಸಲ್ ಮತ್ತಿತರ ಇಂಧನಗಳ ಬಳಕೆಯಿಂದ ಆಗುವ ಪರಿಸರದ ಹಾನಿ, ಮಾಲಿನ್ಯಗಳನ್ನು ಮನಗಂಡವರು. ಮೆಟ್ರೋ ಸಾರಿಗೆಯ ಚಾಲನೆ ವಿದ್ಯುಚ್ಛಕ್ತಿಯನ್ನೇ ಅವಲಂಬಿಸಿರುವುದು, ಪರಿಸರ ಸಂರಕ್ಷಣೆಯ ವಿಷಯದಲ್ಲಿ ಅನಂತಕುಮಾರರ ದೂರದರ್ಶಿತ್ವವನ್ನು ಬಿಂಬಿಸುತ್ತದೆ. ಕರ್ನಾಟಕದ ಹಿತದೃಷ್ಟಿಯಿಂದ ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವಿದೆ. ದೇಶದ ಎಲ್ಲೆಡೆ ಮೆಟ್ರೋ ಸಾರಿಗೆಗೆ ಅಗತ್ಯವಾದ ಬೋಗಿಗಳ ತಯಾರಿಕೆ ಆಗುವುದೇ ಬೆಂಗಳೂರಿನ ಬಿ ಇ ಎಂ ಎಲ್ ನಲ್ಲಿ. ಈ ವ್ಯವಸ್ಥೆಯಿಂದ ಕರ್ನಾಟಕಕ್ಕೆ ಲಭ್ಯವಾಗುವ ಅನುಕೂಲ, ಉದ್ಯೋಗಸೃಷ್ಟಿ ಮೊದಲಾದವನ್ನೂ ಅನಂತಕುಮಾರ್ ಮನಗಂಡಿದ್ದರು.

ಜೂನ್, 2017 ರಲ್ಲಿ ನಮ್ಮ ಮೆಟ್ರೋ ರೈಲುಗಳಲ್ಲಿ ಕನ್ನಡದ ಬಳಕೆಗಾಗಿ ಒತ್ತಾಯಿಸಿ ಕೂಗು ಕೇಳಿಬಂದಾಗ ಕನ್ನಡಪರವಾದ ನಿಲುವು ತಳೆದು ನಮ್ಮ ಮೆಟ್ರೋ ಸಂಸ್ಥೆಯು ಕನ್ನಡವನ್ನು ವ್ಯಾಪಕವಾಗಿ ಬಳಸುವಂತೆ ಮಾಡಿದರು. ಹೊಸಹಳ್ಳಿ ಮೆಟ್ರೋ ನಿಲ್ದಾಣದ ಹೆಸರನ್ನು ಬಾಲಗಂಗಾಧರನಾಥ ಸ್ವಾಮೀಜಿ ನಿಲ್ದಾಣ ಎಂದು ಬದಲಾಯಿಸಲು ಅನಂತಕುಮಾರರ ಪ್ರಯತ್ನವೇ ಕಾರಣ. ಇದಕ್ಕೂ ಮೊದಲು ನವದೆಹಲಿಯ ಮೋತಿಬಾಗ್ ಮೆಟ್ರೋ ರೈಲು ನಿಲ್ದಾಣಕ್ಕೆ ದೇಶ ಕಂಡ ಮಹಾನ್ ಇಂಜಿನಿಯರ್, ಭಾರತ ರತ್ನ, ಸರ್ ಎಂ ವಿಶ್ವೇಶ್ವರಯ್ಯನವರ ಹೆಸರನ್ನು ಇಡಲು ಅನಂತಕುಮಾರರೇ ಕಾರಣ. ಇವೆಲ್ಲ ಅನಂತಕುಮಾರರ ನಾಡು, ನುಡಿಗಳ ಮೇಲಿನ ಪ್ರೇಮದ ದ್ಯೋತಕವಾಗಿವೆ. ಇಂದು ಬೆಂಗಳೂರಿನಲ್ಲಿ ನಮ್ಮ ಮೆಟ್ರೋ ರೈಲು ಸಂಪರ್ಕವು ಬೆಂಗಳೂರಿಗರ ಹೆಮ್ಮೆಯೆನಿಸಿದೆ. ಮಾತ್ರವಲ್ಲ, ನಮ್ಮ ಮೆಟ್ರೋ ತನ್ನ ಜಾಲವನ್ನು ನಗರದ ಉದ್ದಗಲಕ್ಕೂ ಹಬ್ಬಿಸಲು ಸಜ್ಜಾಗಿದೆ. ಈ ಮೂಲಕ ಅನಂತಕುಮಾರರ ಹೆಸರನ್ನು ಬೆಂಗಳೂರಿನ ಇತಿಹಾಸದಲ್ಲಿ ಚಿರಸ್ಥಾಯಿಯಾಗಿಸಿದೆ.

## ಚಾಣಾಕ್ಷತೆಯನ್ನು ಮೆರೆದು ಮಿರುಗಿದ ರಾಜಕೀಯ ಧ್ರುವ ನಕ್ಷತ್ರ

ಪುಟ 3 ರಿಂದ

ತುರ್ತು ಪರಿಸ್ಥಿತಿಗೆ ಒಂದೆರಡು ವರ್ಷಗಳ ಮೊದಲು ಆರೆಸ್ಸೆಸ್ ಶಾಖೆಗೆ ದಾಖಲಾದ ಅನಂತ್ ಅಂದಿನಿಂದ ಹಿಂದಿರುಗಿ ನೋಡಲಿಲ್ಲ. ನಿರಂತರವಾಗಿ ಪ್ರಗತಿ ಪಥದಲ್ಲಿ ಮೇಲೆ ಮೇಲಕ್ಕೆ ಏರುತ್ತಲೇ ಹೋದರು. ಸ್ವಾತಂತ್ರ್ಯ ಹೋರಾಟಗಾರರ ಜೀವನಗಳನ್ನು ಓದಿದ್ದ ಅವರು ಮುಂಚೂಣಿಯಲ್ಲಿ ನಿಂತು ಯಶಸ್ವಿಯಾಗಿ ನಿರ್ವಹಿಸಿದ ಚಳವಳಿಗಳು, ಹೋರಾಟಗಳು ಅವೆಷ್ಟೋ! ಹುಬ್ಬಳ್ಳಿಯ ಈದ್ಗಾ ಮೈದಾನದ ಹೋರಾಟದಲ್ಲಿ ಅವರ ಪಾತ್ರ ಅವಿಸ್ಮರಣೀಯ. ಅದೇ ಅವರ ಹೋರಾಟದ ಬಾಳಿನ ಪ್ರಥಮ ಸೋಪಾನ.

ಅವರ ಚಿತ್ತಾಕರ್ಷಕ ವ್ಯಕ್ತಿತ್ವ, ಮುನ್ನುಗ್ಗುವ ದಿಟ್ಟ ನಡೆನುಡಿ, ವಿಜಿಗೀಷು ಪ್ರವೃತ್ತಿ, ಸಂಘಟನೆಗಳ ಹಿರಿಯರ ಗಮನ ಸೆಳೆದು ಅಲ್ಲಿಯೂ ಅವರಿಗೆ ಉತ್ತೇಜನ ದೊರೆತು ಯಶಸ್ಸಿನಿಂದ ಯಶಸ್ಸಿಗೆ ದಾಪುಗಾಲು ಹಾಕಲಾರಂಭಿಸಿ ಅನಂತ್ ಒಂದೇ ಸಮನೆ ಉತ್ತುಂಗದತ್ತ ಪಯಣಿಸಿದರು. ವಿದ್ಯಾರ್ಥಿ ಪರಿಷತ್ತಿನ ಕಾರ್ಯದರ್ಶಿ ಹಾಗೂ ರಾಷ್ಟ್ರೀಯ ಅಧ್ಯಕ್ಷರಾಗಿ ಅವರು ಸಂಘಟನೆಯನ್ನು ಕಟ್ಟಿದ ಪರಿ ಕರ್ನಾಟಕ ಪರಿಷತ್ತಿನ ಇತಿಹಾಸದ ಸುವರ್ಣ ಪುಟಗಳೇ ಎನ್ನಬಹುದು. ಅನಂತರ ಅವರಲ್ಲಿ ಸುಪ್ತವಾಗಿದ್ದ ಅನೇಕ ಗುಣಗಳು, ಸಾಮರ್ಥ್ಯಗಳು ಗರಿಗೆದರಿದ್ದು ಅವರಿಗೆ ಆಯಾ ಸಂಘಟನೆಗಳ ಹಿರಿಯ ನಾಯಕರ ಒತ್ತಾಸೆ ದೊರೆತಾಗ. ಭಾರತೀಯ ಜನತಾ ಪಾರ್ಟಿಯ ಸಾಮಾನ್ಯ ಕಾರ್ಯಕರ್ತನಾಗಿ ಹೆಜ್ಜೆ ಇಡಲಾರಂಭಿಸಿದ ಅನಂತ್ ಬಹು ಶೀಘ್ರವೇ ಲೋಕಸಭಾ ಅಭ್ಯರ್ಥಿಯಾಗಿ ಆಯ್ಕೆಯಾದರು. ಗೆದ್ದರು. ಆರು ಬಾರಿ ಗೆಲ್ಲುತ್ತಲೇ ಹೋಗಿ ಸೋಲಿಲ್ಲದ ಸರ್ದಾರ ಎನ್ನಿಸಿಕೊಂಡರು; ಜನಾನುರಾಗಿಯಾದರು. ಅವರಿಗೆ ದೊರೆತ ಸಂಸತ್ ಸದಸ್ಯನ ಅಧಿಕಾರದ ಸಂಪೂರ್ಣ ಬಳಕೆ ಮಾಡಿ ಜನಪರ ಕಾರ್ಯಗಳನ್ನು ಮಾಡಿ ಕೀರ್ತಿಶಾಲಿಗಳಾದರು.

ಜನಸಂಘದ ಹಿರಿಯ ನಾಯಕರಾದ ಕರ್ನಾಟಕ ಕೇಸರಿ ಜಗನ್ನಾಥರಾವ್ ಜೋಷಿ, ಭಾವೂರಾವ್ ದೇಶಪಾಂಡೆ ಮುಂತಾದವರ ಪ್ರೀತಿಗಳಿಸಿದ್ದ ಅನಂತ್ ಪಕ್ಷವು ಬಿಜೆಪಿಯಾದ ಅನಂತರ ಅಟಲ್ ಜೀ, ಅದ್ವಾನೀಜಿ, ಮುರಳಿ ಮನೋಹರ ಜೋಷಿ, ಸುಷ್ಮಾ ಸ್ವರಾಜ್, ಮುಂತಾದ ರಾಷ್ಟ್ರೀಯ ಸ್ತರದ ಹಿರಿಯ ನಾಯಕರ ಆತ್ಮೀಯರೂ ಆಗಿದ್ದರು. ನರೇಂದ್ರ ಮೋದಿ, ಪ್ರಮೋದ್ ಮಹಾಜನ್, ಅರುಣ್ ಜೇಟ್ಲಿ, ವೆಂಕಯ್ಯನಾಯ್ಡು ಮುಂತಾದ ಹತ್ತಾರು ನಾಯಕರ ಸಹವರ್ತಿಗಳಾಗಿದ್ದರು. ಅವರು ಕೇಂದ್ರ ಮಂತ್ರಿಗಳಾಗಿ ತಮ್ಮ ಪಾಲಿಗೆ ಬಂದ ಖಾತೆಗಳನ್ನು ಶ್ರದ್ಧೆ, ನಿಷ್ಠೆಗಳಿಂದ ಸಮರ್ಥವಾಗಿ ನಿರ್ವಹಿಸಿದ್ದನ್ನು ಇಡೀ ದೇಶ ನೋಡಿದೆ. ಅದಮ್ಯ ಚೇತನವೇ ಮುಂತಾದ ಹತ್ತಾರು ಸಂಸ್ಥೆಗಳ ಮೂಲಕ ತಮ್ಮ ಪತ್ನಿ ಶ್ರೀಮತಿ ತೇಜಸ್ವಿನಿಯವರನ್ನು ಜೊತೆ ಮಾಡಿಕೊಂಡು ಸಲ್ಲಿಸಿರುವ ಜನ ಸೇವೆ ಸಮಾಜದ ಕಣ್ಣ ಮುಂದೆ ಇದೆ. ಅನಂತ್ ತಮ್ಮ ಆತ್ಮಚರಿತ್ರೆ ಬರೆದಿದ್ದರೆ ಅದು ಸ್ವಾತಂತ್ರ್ಯೋತ್ತರ

ಭಾರತದ ರಾಜಕೀಯ ಬೆಳವಣಿಗೆಗಳ ಅಪೂರ್ವ ದಾಖಲೆಯಾಗುತ್ತಿತ್ತು. ಬರೆಯುವ ಪ್ರತಿಭೆಯೂ ಇತ್ತು. ಅನುಭವ ರಾಶಿಯೂ ಇತ್ತು. ಆದರೆ ಅದು ಘಟಿಸಲಿಲ್ಲ.

ಉತ್ತಮ ಸಂಘಟಕರಾಗಿ, ರಾಜಕೀಯ ಪಟ್ಟುಗಳೆಲ್ಲವನ್ನು ಕಲಿತು ಚೆನ್ನಾಗಿ ಪ್ರಯೋಗಿಸಿ ಯಶಸ್ಸನ್ನು ಸಾಧಿಸಿದ ಅನಂತ್ ಅಸೀಮ ಧೈರ್ಯಶಾಲಿ. ಎಲ್ಲ ಪಕ್ಷಗಳ ಎಲ್ಲ ನಾಯಕರ ಜೊತೆ ಅನ್ಯೋನ್ಯ ಸಂಬಂಧವಿರಿಸಿಕೊಂಡಿದ್ದ ಅಪರೂಪದ ರಾಜಕಾರಣಿ. ಸೋಲಿಲ್ಲದ ಸರದಾರ. ಹಿಂಜರಿಯದ ಹಮ್ಮೀರ. ಹಲವು ಸಮರಗಳ ಕಲಿ. ಜನಪ್ರಿಯ ನಾಯಕ. ಅವರು ಇದ್ದ ಕಡೆ ಉತ್ಸಾಹ, ಸಂಭ್ರಮಗಳಿರುತ್ತಿದ್ದವು. ರಾಜಕಾರಣದಲ್ಲಿ ಅದ್ಭುತ ಚಾಣಾಕ್ಷತೆಯನ್ನು ಮೆರೆದ ಅವರು ೨೦೧೮ರ ನವೆಂಬರ್ ೧೨ರಂದು ಅಲ್ಪಕಾಲದ ಅನಾರೋಗ್ಯದ ಅನಂತರ ವಿಧಿವಶರಾದಾಗ ಒಂದು ರಾಜಕೀಯ ಧ್ರುವ ನಕ್ಷತ್ರ ಕಳಚಿ ಬಿದ್ದಿತ್ತು.

# ಮನೆಬಾಗಿಲಿಗೆ ಬಂದ ಹರಿದಾಸರು!

ಅನುಭವಕಥನ - ಶ್ರೀಮತಿ ಸುವಾಸಿನಿ ನಾರಾಯಣ್

೧೯೬೫ ಬೇಸಗೆ. ಆ ವರ್ಷದ ಶೈಕ್ಷಣಿಕ ಅವಧಿ ಪ್ರಾರಂಭಗೊಳ್ಳುವಾಗ ಅನಂತಕುಮಾರನನ್ನು ಶಾಲೆಗೆ ಸೇರಿಸಬಹುದೆಂದು ಶಾಸ್ತ್ರಿ ದಂಪತಿ ಯೋಚಿಸಿಕೊಂಡಿದ್ದರು. ಆ ಹೊತ್ತಿಗೆ ಮಗನಿಗೆ ಕಾಣಿಸಿಕೊಂಡ ಜ್ವರವು ತಮ್ಮ ಯೋಜನೆಯನ್ನು ದಿಕ್ಕುತಪ್ಪಿಸಬಹುದೆಂಬ ಕಲ್ಪನೆಯಾದರೂ ತಂದೆತಾಯಿಗಳಿಗೆ ಇರಲಿಕ್ಕಿಲ್ಲ. ಎರಡು ಮೂರು ದಿನವಾದರೂ ಜ್ವರ ವಾಸಿಯಾಗದಿದ್ದಾಗ ಶಾಸ್ತ್ರಿಗಳು ಅನಂತಕುಮಾರನನ್ನು ರೈಲ್ವೇ ಆಸ್ಪತ್ರೆಗೆ ಸೇರಿಸಿದರು.

ಜ್ವರದಿಂದ ಬಳಲುತ್ತಿದ್ದ ಮಗುವಿಗೆ ಪೋಲಿಯೋ ಆಗಿರುವ ಸಾಧ್ಯತೆಯಿದೆಯೆಂಬ ವೈದ್ಯರ ಮಾತುಗಳನ್ನು ಕೇಳಿಯೇ ಗಿರಿಜಾ ಶಾಸ್ತ್ರಿ ಕುಸಿದು ಬಿದ್ದರು. ಏನೂ ತೋಚದೆ ಕಂಗೆಟ್ಟು ಕುಳಿತ ಪತ್ನಿಯನ್ನು ಸಂತೈಸಿದ ನಾರಾಯಣ ಶಾಸ್ತ್ರಿಯವರು ಇನ್ನಿಬ್ಬರು ಚಿಕ್ಕ ಮಕ್ಕಳ ಪಾಲನೆಗೆ ಪತ್ನಿಯನ್ನು ಮನೆಯಲ್ಲೇ ಬಿಟ್ಟು, ಆಸ್ಪತ್ರೆಯಲ್ಲಿರುವ ಮಗನ ಶುಶ್ರೂಷೆಯನ್ನು ತಾವು ವಹಿಸಿಕೊಂಡರು.

ಮರುದಿನ ತಾಯಿ ತನ್ನನ್ನು ನೋಡಲು ಬಂದಾಗ ಅನಂತ ತಾನೇ ಅವರನ್ನು ಅಕ್ಕರೆಯಿಂದ ವಿಚಾರಿಸಿಕೊಂಡ. ಯಾಕಮ್ಮ ಕಣ್ಣೆಲ್ಲ ಕೆಂಪಾಗಿದೆ? ಎಂದು ಕೇಳಿದ. ತಾಯಿ ಪಾಪ, ಏನೆಂದು ಹೇಳಿಯಾಳು? ' ಸಿಟಿ ಬಸ್ಸಿನಲ್ಲಿ ಬಂದೆವಲ್ಲ, ದಾರಿಯಲ್ಲಿ ತುಂಬ ದೂಳು. ಕಣ್ಣಿಗೆ ಬಿದ್ದು ಕೆಂಪಾಗಿದೆ ಅಷ್ಟೆ, ಮಗು' ಎಂದು ಗಿರಿಜಾರವರು ವಿವರಣೆ ಕೊಡಬೇಕಾಯಿತು.

ನಿದ್ರೆಯಿಲ್ಲದೆ ನೆಮ್ಮದಿಗೆಟ್ಟ ಗಿರಿಜಾ ಶಾಸ್ತ್ರಿಯವರಿಗೆ ಯಾವಾಗಲೋ ಬೆಳಗಿನ ಜಾವದಲ್ಲಿ ಒಂದಿಷ್ಟು ಮಂಪರು. ಯಾವುದೋ ರೂಪವೊಂದು ಎದುರಿಗೆ ಕಾಣಿಸಿಕೊಂಡಿದೆ. ಯಾರೆಂದು ತಿಳಿಯವೊಲ್ಲದು. ಮಗನ ಅನಾರೋಗ್ಯಕ್ಕೆ ಏಕೆ ಚಿಂತಿಸುತ್ತೀಯಾ, ನಿನ್ನ ಮಗನನ್ನು ನಾನು ಕಾಪಾಡುತ್ತೇನೆ ಎನ್ನುತ್ತಿದ್ದಾರೆ. ಗಿರಿಜಾರವರು ದೀನವಾಗಿ ಆತನನ್ನೇ ನೋಡುತ್ತಿರುವಂತೆಯೇ ಆ ವ್ಯಕ್ತಿ ಮಾತು ಮುಂದುವರಿಸುತ್ತಾರೆ: ' ನಿಮ್ಮ ಮನೆ ಬಾಗಿಲಿಗೆ ಎಂಟು ಜನ ಹರಿದಾಸರು ಬರುತ್ತಾರೆ. ಅವರನ್ನು ಸ್ವಾಗತಿಸಿ ಕಾಲುತೊಳೆದು, ಅವರಿಗೆ ಭೋಜನಸಾಮಗ್ರಿಯೆಲ್ಲ ಕೊಡು. ನಿನ್ನ ಬೆನ್ನಿಗೆ ಕಾಲುತಾಗಿಸಿ ಆಶೀರ್ವಾದ ಮಾಡುವಂತೆ ಹೇಳು. ಎಲ್ಲ ಸರಿಯಾಗುತ್ತದೆ ' ಅನುಗ್ರಹವಾಣಿ ಕೊನೆಗೊಂಡು ದೃಶ್ಯ ಮರೆಯಾಯಿತು. ಕನಸಲ್ಲಿ ಕಂಡದ್ದು ಅಸ್ಪಷ್ಟವಾದರೂ ಮಾತು ಕಿವಿಯಲ್ಲೇ ಉಳಿದಿತ್ತು. ಆಸ್ಪತ್ರೆಯಿಂದ ನಾರಾಯಣಶಾಸ್ತ್ರಿ ಬರುವುದನ್ನೇ ಗಿರಿಜಾ ಕಾಯುತ್ತಿದ್ದರು.

ಅಷ್ಟರಲ್ಲಿ ಸಾಕ್ಷಾತ್ ಪುರಂದರದಾಸರ ಆಗಮನವಾಯಿತು. ಹಾಗೆ ದಾಸವೇಷಧಾರಿಯಾಗಿ ಬಂದವರು ನೆರೆಮನೆಯ ಸಜ್ಜನ ಮಿತ್ರರಾದ ವೈದ್ಯರೆಂಬುವರು. ರೈಲ್ವೆ ಇಲಾಖೆಯಲ್ಲಿ ಶಾಸ್ತ್ರಿಯವರ ಸಹೋದ್ಯೋಗಿಯಾಗಿದ್ದವರು. ಬಹುಶಃ ಶಾಸ್ತ್ರಿಗಳು ಆಸ್ಪತ್ರೆಯಿಂದ ಬರುವ ಹೊತ್ತಿಗೆ ಅನಂತನ ಆರೋಗ್ಯ ವಿಚಾರಿಸಲು ಬಂದಿರಬೇಕೆಂದು ಗಿರಿಜಾ ತಿಳಿದಿದ್ದರು. ವೈದ್ಯರವರು ಗಿರಿಜಾರವರನ್ನೇ ಉದ್ದೇಶಿಸಿ, "ಗಿರಿಜಮ್ಮ, ಈಗ ರಾಮನವಮಿಯ ಸಂದರ್ಭ. ಅನ್ನ ಸಂತರ್ಪಣೆಗೆ ಆಹಾರಸಾಮಗ್ರಿಗಳನ್ನು ಸಂಗ್ರಹಿಸಲು ಹೊರಡುತ್ತೇವೆ. ನೀವು ನನ್ನ ತಂಗಿ ಇದ್ದ ಹಾಗೆ. ಮೊದಲಿಗೆ ನಿಮ್ಮ ಮನೆಗೇ ಬರಬೇಕೆಂದಿದ್ದೇವೆ. ನಾವು ಕೆಲವರು ದಾಸರ ವೇಷದಲ್ಲಿ ಇವತ್ತು ಒಂಬತ್ತು ಗಂಟೆಯ ಹೊತ್ತಿಗೆ ನಿಮ್ಮ ಮನೆಗೆ ಬರುತ್ತೇವೆ. ನಿಮ್ಮಲ್ಲಿ ಏನಿದೆಯೋ ಎಷ್ಟು ಸಾಧ್ಯವೋ ಅಷ್ಟು ಜೋಳಿಗೆಗೆ ಹಾಕಿ. ಎಲ್ಲ ಒಳ್ಳೆಯದಾಗುತ್ತದೆ ಎಂದರು."



ವೈದ್ಯರ ಮಾತುಗಳನ್ನು ಕೇಳಿ ಗಿರಿಜಾರವರಿಗೆ ಅಪಾರ ಸಂತೋಷವಾಯಿತು. ತಾನು ಕಂಡ ಕನಸು ಹೀಗೆ ನನಸಾಗುತ್ತಿರುವುದಕ್ಕೆ ಮನಸ್ಸು ತುಂಬಿ ಬಂದಿತು. ಬೇಗನೆ ಸ್ನಾನ ಮುಗಿಸಿ ಮಡಿಯುಟ್ಟುಕೊಳ್ಳುವಷ್ಟರಲ್ಲಿ ಆಸ್ಪತ್ರೆಯಿಂದ ಶಾಸ್ತ್ರಿಯವರ ಆಗಮನವೂ ಆಯಿತು.

ಶಾಸ್ತ್ರಿಗಳು ಬಂದವರೇ ಕಾಲೊನಿಯ ಹಾಲು ಸರಬರಾಜು ಕೇಂದ್ರದಿಂದ ಹಾಲು ತರಲು ಹೊರಟರು. ಆಸ್ಪತ್ರೆಯಲ್ಲಿ ರೋಗಿಗಳಿಗೆ ಬ್ರೆಡ್ ಕೊಡುತ್ತಾರೆಯೇ ಹೊರತು ಹಾಲು ಕೊಡುವ ವ್ಯವಸ್ಥೆಯಿಲ್ಲ. ಅನಂತಕುಮಾರನಿಗೆ ಮನೆಯಲ್ಲಿ ಕೊಡುತ್ತಿದ್ದಂತೆ ಹಾಲಿಗೆ ವಿವಾ ಪುಡಿಯನ್ನು ಬೆರೆಸಿ ಫ್ಲಾಸ್ಕಿನಲ್ಲಿ ಹಾಕಿ ತೆಗೆದುಕೊಂಡು ಹೋಗಬೇಕಲ್ಲ. ಆ ಧಾವಂತದಲ್ಲೇ

ಪುಟ 9 ರಲ್ಲಿ ಮುಂದುವರೆದಿದೆ



# ಅದಮ್ಯ ಚೇತನದ ನಿತ್ಯ ಅನ್ನದಾನ ಯೋಜನೆ



ಪುಟ 2 ರಿಂದ ನವೀನ್ ಮುಂತಾದ ಉತ್ಸಾಹಿ ಯುವಕರು ತಮ್ಮ ಪ್ರದೇಶದಲ್ಲಿ ನಿತ್ಯ ಅನ್ನದಾನವನ್ನು ದಿನಾಂಕ 11/08/2020 ರಿಂದ ಪ್ರಾರಂಭಿಸಿದರು. ಈ ಉತ್ಸಾಹಿಗಳ ತಂಡಕ್ಕೆ ದಿನವೊಂದಕ್ಕೆ ಕನಿಷ್ಟ 200 ರಂತೆ ಈ ಸಂಚಿಕೆ ಪ್ರಕಟವಾಗುವ ದಿನಕ್ಕೆ ಅಂದರೆ ಸುಮಾರು 197 ದಿನಗಳಲ್ಲಿ 41000 ಜನರಿಗೆ ಆಹಾರವನ್ನು ಅದಮ್ಯ ಚೇತನ ಸಂಸ್ಥೆ ಸರಬರಾಜು ಮಾಡಿದೆ.

ಅನಂತಕುಮಾರರ ಪುಣ್ಯದಿನದಂದು ಅಂದರೆ 19/11/2020 ರಂದು ಗವಿಪುರದ ಕನ್ನಡಕಟ್ಟೆಯಲ್ಲಿ ಪ್ರಾರಂಭವಾದ ನಿತ್ಯ ಅನ್ನದಾನ ಯೋಜನೆಯಲ್ಲಿ ಕಳೆದ 96 ದಿನಗಳಲ್ಲಿ ಸುಮಾರು 14600 ಜನರು ಪ್ರಯೋಜನ ಪಡೆದಿದ್ದಾರೆ.



**ಯಶಸ್ಸಿನ ರೂವಾರಿಗಳು**

ಶ್ರೀಮತಿ ತೇಜಸ್ವಿನಿಯವರ ಕಲ್ಪನೆಯ ಯೋಜನೆಯನ್ನು ಸ್ವಯಂಸೇವಕರ ಒಂದು ತಂಡ ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಶ್ರೀಮತಿ ಶ್ರೀಲಕ್ಷ್ಮಿ ವಿಶ್ವನಾಥ ಅವರು ಸಮಗ್ರ ಯೋಜನೆಯ ಸಂಚಾಲಕಿಯಾಗಿದ್ದಾರೆ. ಶ್ರೀಮತಿ ಲಕ್ಷ್ಮಿ ಎಸ್ ಮತ್ತು ಕುಮಾರಿ ಕಾವ್ಯ ಜಿ ರಾವ್ ಯೋಜನೆಯ ಇತರ ವ್ಯವಹಾರಗಳ ಜೊತೆಗೆ ಕಲಾಜ್ಯೋತಿ ಕಟ್ಟೆಯ ಅನ್ನದಾನದ ಜವಾಬ್ದಾರಿ ಹೊತ್ತಿದ್ದಾರೆ. ಬೆಮೆಲ್ ಸಂಸ್ಥೆಯ ಉದ್ಯೋಗದಿಂದ ನಿವೃತ್ತರಾಗಿರುವ ಶ್ರೀ ಎನ್ ಪ್ರಕಾಶ್, ಶ್ರೀ ಶ್ರೀಕಾಂತ್, ಅದಮ್ಯ ಚೇತನದ ಶ್ರೀ ಚೇತನ ಬಳಗದ ಸದಸ್ಯರು ಸೇರಿದಂತೆ ಅನೇಕ ಸ್ವಯಂಸೇವಕರು ದಿನನಿತ್ಯ ತಮ್ಮ ಸೇವೆಯನ್ನು ಇಲ್ಲಿ ಸಲ್ಲಿಸುತ್ತಿದ್ದಾರೆ.

ಜಯನಗರದ ಅನ್ನದಾನ ಕಾರ್ಯಕ್ರಮವನ್ನು ಮಾಜಿ ಕಾರ್ಪೊರೇಟರ್ ಶ್ರೀ ರಮೇಶ ರಾಜು ಅವರು ತಮ್ಮ ಸ್ವಯಂಸೇವಕ ಮಿತ್ರರೊಂದಿಗೆ ಸೇರಿ ನೋಡಿಕೊಳ್ಳುತ್ತಿದ್ದರೆ, ರಾಜರಾಜೇಶ್ವರಿ ನಗರದ ಕಾರ್ಯಕ್ರಮವನ್ನು ಶ್ರೀ ಜಗದೀಶ್ (ಚಿತ್ರ ತಾರೆ ಅಮೂಲ್ಯ ಅವರ ಪತಿ) ಮತ್ತು ಅವರ ತಂದೆ ಮಾಜಿ ಕಾರ್ಪೊರೇಟರ್ ಶ್ರೀ ರಾಮಚಂದ್ರ ಪ್ರಾಯೋಜಿಸಿದ್ದಾರೆ. ಇಲ್ಲಿನ ವಿಶೇಷವೆಂದರೆ, ಪ್ರತಿ ಶುಕ್ರವಾರವೂ ಬೇರೆ ಬೇರೆ ಹಿರಿಯರ ಹೆಸರಿನಲ್ಲಿ, ಉದಾಹರಣೆಗೆ, ಶಾಸಕರಾದ ಮುನಿರತ್ನ, ಹಿರಿಯ ಕವಿ ಸಿದ್ದಲಿಂಗಯ್ಯ ಮುಂತಾದವರ ಹೆಸರಿನಲ್ಲಿ ಅನ್ನದಾನ ಮಾಡಲಾಗುತ್ತಿದೆ.

ಪುಟ 7 ರಲ್ಲಿ ಮುಂದುವರೆದಿದೆ



ಶ್ರೀ ಅನಂತಕುಮಾರ್ ಮತ್ತು ಶ್ರೀಮತಿ ತೇಜಸ್ವಿನಿಯವರ ಸಮಾಜಸೇವಾ ಮನೋಭಾವದಿಂದ ಪ್ರಭಾವಿತರಾಗಿರುವವರಲ್ಲಿ ನಾನೂ ಒಬ್ಬ. ಅದಮ್ಯ ಚೇತನದ ನಿತ್ಯ ಅನ್ನದಾನ ಕಾರ್ಯಕ್ರಮ ಅತ್ಯಂತ ಉದಾತ್ತವಾದುದು. ಈ ಯೋಜನೆಯ ಮಹತ್ವವನ್ನು ಮನಗಂಡು ನಾನು ನಮ್ಮ ಕನ್ನಡ ತಿಂಡಿ ಕೇಂದ್ರದಲ್ಲೂ ಹೀಗೆ ಬಡವರಿಗೆ ಉಚಿತವಾಗಿ ಭೋಜನ ಒದಗಿಸಲು ವ್ಯವಸ್ಥೆ ರೂಪಿಸಿದ್ದೇನೆ. ನಮ್ಮಲ್ಲಿಗೆ ಬರುವ ಉದಾರಿ ಗ್ರಾಹಕರೂ ಇದಕ್ಕೆ ಕೈಜೋಡಿಸಿ ಸಹಾಯಮಾಡುತ್ತಿದ್ದಾರೆ. ಇಂತಹ ಸಾರ್ಥಕ ಕಾರ್ಯಕ್ರಮ ನಮ್ಮ ಮನಸ್ಸಿಗೆ ಧನ್ಯತಾ ಭಾವ ಮೂಡಿಸುವುದರಲ್ಲಿ ಸಂಶಯವಿಲ್ಲ.




**- ಡಾ. ಕೃ.ವೆ. ರಾಮಚಂದ್ರ**,
ಕನ್ನಡ ತಿಂಡಿ ಕೇಂದ್ರ, ಚಾಮರಾಜಪೇಟೆ.

ವೃತ್ತಿಯಲ್ಲಿ ನಾನು ಪೇಯಿಂಟರ್. ಲಾಕ್ಡೌನ್ ಪ್ರಾರಂಭವಾದ ದಿನದಿಂದ ನನಗೆ ಉದ್ಯೋಗವಿಲ್ಲ. ಬೇರೆ ಆದಾಯ ಮೂಲವೂ ಇಲ್ಲ. ನನ್ನಂತೆ ಇತರ ಅನೇಕರೂ ದುಃಸ್ಥಿತಿಯಲ್ಲಿದ್ದಾರೆ. ನಮಗೆಲ್ಲರಿಗೂ ಒಂದುಹೊತ್ತಿನ ಊಟವಾದರೂ ಹೊಟ್ಟೆತುಂಬ ದೊರೆಯುವ ಭರವಸೆ ಅದಮ್ಯ ಚೇತನ ಸಂಸ್ಥೆ ಉಂಟುಮಾಡಿದೆ. ಆ ಅಮ್ಮನನ್ನು ದಿನನಿತ್ಯ ಸ್ಮರಿಸಿಕೊಳ್ಳುತ್ತೇವೆ. ದೇವರು ಅವರನ್ನು ಚೆನ್ನಾಗಿಟ್ಟಿರಲಿ.



**- ಶ್ರೀ ಶ್ರೀನಿವಾಸ್.**

ಹಲವು ವರ್ಷಗಳ ಹಿಂದೆ ನಾನು ತಳ್ಳುಗಾಡಿ ವ್ಯಾಪಾರಿಯಾಗಿದ್ದೆ. ಈಗ ವಯಸ್ಸಾಗಿ ನಿರ್ಗತಿಕನಾಗಿದ್ದೇನೆ. ಮನೆಯಲ್ಲಿ ಯಾರಿಗೂ ಆದಾಯವಿಲ್ಲ. ಕಳೆದ ಮೂರು ತಿಂಗಳಿನಿಂದ ಮಧ್ಯಾಹ್ನದ ಊಟ ನೀಡುತ್ತಿದ್ದಾರೆ. ನನ್ನ ವಯಸ್ಸಿಗೆ ಒಂದು ಹೊತ್ತಿನ ಊಟ ಸಿಕ್ಕಿದರೂ ಸಾಕು. ಈಗ ನನಗೆ ಸ್ವಲ್ಪ ನೆಮ್ಮದಿ ಸಿಕ್ಕಿದೆ.



**- ಶ್ರೀ ಮುನಿರಾಜು**

ನಾವು ಮಾಧ್ವ ಬ್ರಾಹ್ಮಣರು. ಆದರೆ ಹಸಿವಿಗೆ ಜಾತಿಯಿದೆಯೆ? ಒಂದು ಕಾಲದಲ್ಲಿ ಚೆನ್ನಾಗಿ ಬದುಕಿದ ನಾನು ಇಂದು ಸಂಬಂಧಿಗಳ ನಿರ್ಲಕ್ಷ್ಯದಿಂದ ನಿರ್ಗತಿಕಳಾಗಿದ್ದೇನೆ. ನನಗೆ ವಯಸ್ಸಾಗಿದೆ. ಸರತಿಯ ಸಾಲಿನಲ್ಲಿ ನಿಲ್ಲಲೂ ಶಕ್ತಿಯಿಲ್ಲ. ಹೀಗಾಗಿ ನನಗೆ ಎಲ್ಲರಿಗಿಂತ ಮೊದಲು ಊಟ ನೀಡುತ್ತಾರೆ. ಸಾಲಿನಲ್ಲಿ ನಿಂತ ಯಾರೂ ಆಕ್ಷೇಪಿಸುವುದಿಲ್ಲ. ರಾತ್ರಿಯ ಊಟಕ್ಕೂ ಇಲ್ಲಿಂದಲೇ ಕೊಂಡೊಯ್ಯುತ್ತೇನೆ. ನಮ್ಮಂತಹ ವೃದ್ಧರಿಗೆ ಉಚಿತ ವೃದ್ಧಾಶ್ರಮ ವ್ಯವಸ್ಥೆ ಮಾಡಿದರೆ ಒಳ್ಳೆಯದಿತ್ತು. ಪರಮಾತ್ಮ ನಿಮ್ಮನ್ನು ಸುಖವಾಗಿಟ್ಟಿರಲಿ.



**-ಶ್ರೀಮತಿ ರಮಾಮಣಿ**

## ನೀವು ಹೇಗೆ ದೇಣಿಗೆ ನೀಡಬಹುದು?

ದಿನವೊಂದರ ಅನ್ನದಾನಕ್ಕೆ ರೂ.2500/- ನೀಡುವ ಮೂಲಕ ನೀವೂ ಈ ಯೋಜನೆಯಲ್ಲಿ ಭಾಗವಹಿಸಬಹುದು.

ನೀವು ಖಾತೆಗೆ ನೇರವಾಗಿ ಜಮಾ ಮಾಡಬಹುದು.
ಖಾತೆಯ ವಿವರ ಈ ಕೆಳಗಿನಂತಿದೆ.
ಖಾತೆಯ ಹೆಸರು: Smt. Girija Shastry Memorial Trust
ಖಾತೆ ಸಂಖ್ಯೆ: 50100215738251
ಬ್ಯಾಂಕಿನ ಹೆಸರು: HDFC Bank
ಶಾಖೆಯ ಹೆಸರು: K R Road, Banashankari II stage.
ಐಎಫ್ಎಸ್ಸಿ: HDFC0000875

ಹಣ ಪಾವತಿಸಿದ್ದಕ್ಕೆ ರಸೀದಿ ಮತ್ತು 80ಜಿ ಪ್ರಮಾಣಪತ್ರಗಳನ್ನು ನೀಡಲಾಗುವುದು.
ಅನ್ನದಾನದ ದಿನಾಂಕ ಮತ್ತು ಇತರ ವಿವರಗಳಿಗೆ ಸಂಪರ್ಕಿಸಿ: ಶ್ರೀಮತಿ ಶ್ರೀಲಕ್ಷ್ಮಿ, ಅದಮ್ಯ ಚೇತನ, ಗವಿಪುರ ಬಡಾವಣೆ, ಬೆಂಗಳೂರು 560019. ಮೊಬೈಲ್ ದೂರವಾಣಿ ಸಂಖ್ಯೆ: 9590469830



ಪುಟ 6 ರಿಂದ

### ಆರ್ಥಿಕ ಬೆಂಬಲ

ವಾರವೊಂದಕ್ಕೆ ಸುಮಾರು 2100 ರಿಂದ 2500 ಜನರಿಗೆ ಅನ್ನದಾನ ಮಾಡಲಾಗುತ್ತಿದೆ. ಇದಕ್ಕೆ ಏನಿಲ್ಲವೆಂದರೂ 50 ರಿಂದ 60 ಸಾವಿರ ರೂಪಾಯಿಗಳ ವೆಚ್ಚ ತಗಲುತ್ತದೆ. ಈ ಪ್ರಮಾಣದ ಯೋಜನೆಯೊಂದನ್ನು ನಿರಂತರವಾಗಿ ನಡೆಸುವುದು ಕಷ್ಟ. ಆರಂಭಿಕ ದಿನಗಳಲ್ಲಿ ಗವಿಪುರದ ಅನ್ನದಾನ ಯೋಜನೆಯ ಸಂಪೂರ್ಣ ವೆಚ್ಚವನ್ನು ಅದಮ್ಯ ಚೇತನ ಸಂಸ್ಥೆಯೇ ಭರಿಸಿತು. ಜಯನಗರದಲ್ಲಿ ಪ್ರತಿ ಶನಿವಾರದ ಅನ್ನದಾನದ ವೆಚ್ಚವನ್ನು ಶ್ರೀಮತಿ ತೇಜಸ್ವಿನಿಯವರೇ ವಹಿಸಿಕೊಂಡಿದ್ದಾರೆ. ಈಗ ಅನೇಕ ಸಹೃದಯ ದಾನಿಗಳು ದೇಣಿಗೆ ನೀಡಲು ಮುಂದೆ ಬರುತ್ತಿದ್ದಾರೆ. ತಮ್ಮ ಜೀವನದ ವಿಶೇಷ ಸಂದರ್ಭಗಳ ನೆನಪಿಗಾಗಿ (ಹುಟ್ಟಿದ ಹಬ್ಬ, ವಿವಾಹ ವಾರ್ಷಿಕೋತ್ಸವ, ತಂದೆ ತಾಯಿಯರ ಪುಣ್ಯದಿನಗಳ ಸಂಸ್ಮರಣೆ ಇತ್ಯಾದಿ) ಆಯಾ ದಿನಗಳ ಅನ್ನದಾನವನ್ನು ದಾನಿಗಳು ಪ್ರಾಯೋಜಿಸಬಹುದು. ಅನ್ನದಾನದ ಸ್ಥಳದಲ್ಲಿ ದಾನಿಗಳ ಹೆಸರನ್ನು ಫಲಕದ ಮೂಲಕ ಪ್ರದರ್ಶಿಸುತ್ತಾರೆ. ದಾನಿಗಳು ಇಷ್ಟಪಟ್ಟರೆ, ತಾವೇ ಬಂದು ಅನ್ನದಾನ ಮಾಡಬಹುದು. ದಾನಿಗಳಿಗೆ ಅದಮ್ಯಚೇತನ ಸಂಸ್ಥೆಯ ಅನ್ನಪೂರ್ಣ ಅಡುಗೆ ಮನೆಯಲ್ಲಿ ಊಟದ ವ್ಯವಸ್ಥೆಯೂ ಇರುತ್ತದೆ.




ಇತರರಿಗೆ ಭೋಜನ ಮಾಡಿಸುವಲ್ಲಿ ಅನಂತಕುಮಾರರಿಗೆ ತುಂಬ ಸಂತೋಷ ಉಂಟಾಗುತ್ತಿತ್ತು. ಅವರ ಮನೆಯಲ್ಲಿ ಸದಾಕಾಲವೂ ಅತಿಥಿಗಳಿದ್ದೇ ಇರುತ್ತಿದ್ದರು. ಹೀಗಾಗಿ ಈ ಅನ್ನದಾನ ಯೋಜನೆ ನಿರಂತರವಾಗಿ ನಡೆಬೇಕೆಂಬುದು ಶ್ರೀಮತಿ ತೇಜಸ್ವಿನಿಯವರ ಆಸೆ. ಅನಂತಕುಮಾರರ ಎರಡನೆಯ ವರ್ಷದ ಪುಣ್ಯದಿನದಂದು ಪ್ರಾರಂಭವಾದ ಈ ಯೋಜನೆಯ ಮೊದಲ 82 ದಿನಗಳಲ್ಲಿ ಸುಮಾರು 12500 ಜನರು ಲಾಭ ಪಡೆದಿದ್ದಾರೆ. ಮಾರೇನ ಹಳ್ಳಿಯಲ್ಲಿ 183 ದಿನಗಳಲ್ಲಿ ಸುಮಾರು 38000 ಜನರಿಗೆ ಮಧ್ಯಾಹ್ನದ ಊಟ ಒದಗಿಸಲಾಗಿದೆ.

ಮಧ್ಯಾಹ್ನದ ಊಟವನ್ನು ನಮ್ಮಲ್ಲಿ ಸ್ವೀಕರಿಸಿದ ಬಡವರು ಹಾಗೆ ಉಳಿಸಿದ ದುಡ್ಡಿನಲ್ಲಿ ಮನೆಗೆ ಹೋಗುವಾಗ ಮಕ್ಕಳಿಗೆ ಹಾಲನ್ನೋ ಮನೆಗೆ ತರಕಾರಿಯನ್ನೋ ಕೊಂಡೊಯ್ಯಬಹುದು, ಅಷ್ಟರ ಮಟ್ಟಿಗೆ ಅವರ ಬಾಳನ್ನು ಉತ್ತಮಪಡಿಸಬಹುದು ಎಂಬುದು ಯೋಜನೆಯ ಉದ್ದೇಶ.



**- ಶ್ರೀಲಕ್ಷ್ಮಿ ವಿಶ್ವನಾಥ್**
ಅನ್ನದಾನ ಯೋಜನೆಯ ಸಂಚಾಲಕಿ

ಒಂದು ದಿನದ ಊಟಕ್ಕೆ ಕಡಿಮೆಯೆಂದರೆ ಸುಮಾರು 4000 ರೂಪಾಯಿಗಳ ವೆಚ್ಚ ತಗಲುವುದಾದರೂ ದಾನಿಗಳಿಂದ ರೂ 2500 ರ ಸಾಂಕೇತಿಕ ಬೆಲೆಯನ್ನು ಮಾತ್ರ ಪಡೆದುಕೊಳ್ಳಲಾಗುತ್ತಿದೆ. ಈ ಹಣಕ್ಕೆ ಆದಾಯ ತೆರಿಗೆ ನಿಯಮಗಳ ಅಡಿಯಲ್ಲಿ 80ಜಿ ಸೌಲಭ್ಯವೂ ಇದೆ.

ದಾನಿಗಳು ಅಪೇಕ್ಷಿಸಿದಲ್ಲಿ ಅವರು ಇಷ್ಟಪಟ್ಟ ಸ್ಥಳದಲ್ಲಿಯೇ ಅನ್ನದಾನವನ್ನು ಮಾಡಬಹುದು. ಈ ಕುರಿತು ಸಾಗಾಣಿಕೆ ವೆಚ್ಚವನ್ನೂ ಅವರು ಹೆಚ್ಚುವರಿಯಾಗಿ ಭರಿಸಬೇಕಾಗುತ್ತದೆ. ದಾನಿಗಳು ಅನ್ನದಾನದ ಜೊತೆಗೆ ಸಿಹಿ ಹಂಚಲು ಬಯಸಿದರೆ ಅದನ್ನೂ ಅವರ ಖರ್ಚಿನಲ್ಲಿಯೇ ವ್ಯವಸ್ಥೆ ಮಾಡಲಾಗುತ್ತದೆ.

### ಮುಂದಿನ ಯೋಜನೆಗಳು

ಸದ್ಯೋಭವಿಷ್ಯದಲ್ಲಿ ವಿಜಯನಗರ ಬಡಾವಣೆಯಲ್ಲಿ ಪ್ರಾರಂಭವಾಗಲಿದೆ. ಈ ಪವಿತ್ರಕಾರ್ಯದಲ್ಲಿ ಸಾರ್ವಜನಿಕರು ಕೈಜೋಡಿಸಿದರೆ ಬೆಂಗಳೂರು ನಗರವು ಹಸಿವು ಮುಕ್ತ ನಗರವಾಗುವುದರಲ್ಲಿ ಸಂಶಯವೇ ಇಲ್ಲ.

ಅನ್ನಂ ಬ್ರಹ್ಮೇತಿ ವ್ಯಜಾನಾತ್. ಅನ್ನಂ ನ ನಿಂದ್ಯಾತ್, ತದ್ ವ್ರತಂ. ಅನ್ನಂ ನ ಪರಿಚಕ್ಷೀತ, ತದ್ ವ್ರತಮ್. ಅನ್ನಂ ಬಹು ಕುರ್ವೀತ, ತದ್ ವ್ರತಮ್. ಅನ್ನವೇ ಬ್ರಹ್ಮವೆಂದು ತಿಳಿದುಕೊಳ್ಳಬೇಕು. ಅನ್ನವನ್ನು ನಿಂದಿಸಕೂಡದು, ಅನ್ನವನ್ನು ನಿರಾಕರಿಸಕೂಡದು (ತಮಗೂ, ಇತರರಿಗೂ), ಅನ್ನವನ್ನು ಬಹುವಾಗಿಮಾಡಬೇಕು, ಇದಕ್ಕೆ ಮೀರಿದ ವ್ರತವಿಲ್ಲ. ಅದಮ್ಯಚೇತನದ ಅನ್ನಪೂರ್ಣಾ ಅಡುಗೆ ಮನೆ ಅನ್ನದ ಅಕ್ಷಯ ಪಾತ್ರೆಯಾಗಲಿ.





ಕೊರೋನಾ ಕಾರಣದಿಂದಾಗಿ ಲಾಕ್ಡೌನ್ ಪ್ರಾರಂಭವಾದಾಗಿನಿಂದ ನಾನು ಅದಮ್ಯಚೇತನದ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದೇನೆ. ಮೊದಲಿಗೆ ಸಿದ್ಧಪಡಿಸಿದ ಆಹಾರವನ್ನು ಅಗತ್ಯವಿರುವ ಜನರಿಗೆ ಅವರಿರುವ ಎಡೆಯಲ್ಲಿಯೇ ವಿತರಿಸಿದೆವು. ನಂತರದ ದಿನಗಳಲ್ಲಿ ಸಾವಿರಾರು ಜನರಿಗೆ ಆಹಾರದ ಪೊಟ್ಟಣಗಳನ್ನು ಒದಗಿಸಿದೆವು. ಹಸಿದವರಿಗೆ ಅನ್ನ ಎಂಬುದೇ ನಮ್ಮ ಸಂಸ್ಥೆಯ ಧ್ಯೇಯ. ಸಾಲಿನಲ್ಲಿ ನಿಂತಿರುವ ಪ್ರತಿಯೊಬ್ಬರೂ ಹಸಿದವರೇ. ಅವರಲ್ಲಿ ನಾವು ಭೇದವೆಣಿಸುವುದಿಲ್ಲ. ಊಟ ಮಾಡಿದವರ ಮುಖದಲ್ಲಿ ಸಂತೃಪ್ತಿಯನ್ನು ನೋಡಿದಾಗ ಹೃದಯ ತುಂಬಿ ಬರುತ್ತದೆ.



**- ಕಾವ್ಯ ಜಿ ರಾವ್**
ಅನ್ನದಾನ ಯೋಜನೆಯ ಕಾರ್ಯಕರ್ತೆ

# ನವಯುಗದ ಆಹಾರ ಮತ್ತು ಆರೋಗ್ಯ

ಕೊಳ್ಳೇಗಾಲ ಶರ್ಮ




ಅನಂತಪಥ ಪತ್ರಿಕೆಯ ಏಳನೆಯ ಸಂಚಿಕೆಯನ್ನು ಮೈಸೂರಿನ ಕೇಂದ್ರ ಆಹಾರ ಸಂಶೋಧನಾ ಕೇಂದ್ರದ ಆಹಾರ ವಿಜ್ಞಾನಿ(ನಿವೃತ್ತ) , ಲೇಖಕ ಶ್ರೀ ಕೊಳ್ಳೇಗಾಲ ಶರ್ಮರವರು ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ' ಹೊಸ ಯುಗದ ಆಹಾರ ಮತ್ತು ಆರೋಗ್ಯ ಎಂಬ ವಿಷಯವನ್ನು ಕುರಿತು ಉಪನ್ಯಾಸ ನೀಡಿದರು. ಶ್ರೀ ಶರ್ಮಾ ರ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಸಂಗ್ರಹವಾಗಿ ನಿರೂಪಿಸಲಾಗಿದೆ.

ನಾನು ಸಾಧಾರಣವಾಗಿ ಆಹಾರದ ಬಗ್ಗೆ ಮಾತಾಡಬೇಕಾದರೆ ಸ್ವಲ್ಪ ಹಿಂಜರಿಯುತ್ತೇನೆ. ಏಕೆಂದರೆ, ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಯಾವುದೇ ವಿಷಯದ ಬಗ್ಗೆ ಖಡಾಖಂಡಿತವಾಗಿ ಇದು ಹೀಗೆಯೇ ಎಂದು ಹೇಳಿಬಿಡಬಹುದು. ಆದರೆ ಆಹಾರದ ವಿಷಯ ಹಾಗಲ್ಲ. , ಹಾಲು ಕೂಡ ಒಳ್ಳೆಯದೋ ಕೆಟ್ಟದ್ದೋ ಎಂದು ಹೇಳಬೇಕಾದರೂ ಎರಡೆರಡು ಬಾರಿ ಯೋಚಿಸಬೇಕಾಗುತ್ತದೆ. ಆಹಾರವಾಗಿ ಹಾಲು ಖಂಡಿತವಾಗಿಯೂ ಒಳ್ಳೆಯದು. ಆದರೆ ಅದೇ ಹಾಲು ಸಂಸ್ಕರಣೆ ಹೊಂದಿ ನಮಗೆ ದೊರೆತಾಗ, ಆ ಸಂಸ್ಕರಿತ ಹಾಲು ಒಳ್ಳೆಯದೋ ಕೆಟ್ಟದ್ದೋ ಅನ್ನುವ ಒಂದು ಸರಳ ಪ್ರಶ್ನೆಗೆ ನಾವು ಉತ್ತರ ಕೊಡಬೇಕಾದರೆ ಎಷ್ಟೋ ಬಾರಿ ಕಷ್ಟಪಡಬೇಕಾಗುತ್ತದೆ. ಆ ಪರಿಸ್ಥಿತಿಯೇ ಬಹುಶ: ನಾವು ಬದಲಾಗುತ್ತಿರುವ ಮುಂದಿನ ನವಯುಗದಲ್ಲಿ ನಮ್ಮ ಆಹಾರ ಹೇಗೆ ಇರಬೇಕು ಅನ್ನುವುದರ ಬಗ್ಗೆ ಯೋಚಿಸುವಂತೆ ಮಾಡುತ್ತದೆ.

ಇಲ್ಲಿ ನಾವು ಎರಡು ವಿಷಯಗಳನ್ನು ಗಮನದಲ್ಲಿಡಬೇಕು. ಆಹಾರವೆಂದರೆ, ವೈಯಕ್ತಿಕವಾಗಿ ನಾವು ಏನು ತಿನ್ನುತ್ತೇವೆ ಅನ್ನುವುದರ ಬಗ್ಗೆ ಗಮನಹರಿಸಬೇಕೇ ಅಥವಾ ಒಟ್ಟು ಸಮಾಜದಲ್ಲಿ ಏನು ತಿನ್ನುತ್ತಿದ್ದೇವೆ ಯಾಕೆ ತಿನ್ನುತ್ತಿದ್ದೇವೆ ಅನ್ನುವುದರ ಬಗ್ಗೆ ಗಮನಹರಿಸಬೇಕೇ? ಇವು ಒಂದೇ ಸಮಸ್ಯೆಯ ಎರಡು ಬೇರೆ ಬೇರೆ ಮುಖಗಳು ಅನ್ನುವುದು ನನ್ನ ಅಭಿಪ್ರಾಯ. ಉದಾಹರಣೆಗೆ, ನಾನು ಏನು ತಿನ್ನುತ್ತೇನೆ ಅನ್ನುವುದಕ್ಕೆ ನನ್ನ ಸಂಸ್ಕೃತಿ, ಬೆಳೆದು ಬಂದಂಥ ಪರಿಸರ, ಮನೆಯಲ್ಲಿ ಇದ್ದಂತಹ ಅವಕಾಶಗಳು ಹಾಗೂ ಇತರೆ ಎಲ್ಲ ಅಂಶಗಳು ಅದರ ಮೇಲೆ ಪ್ರಭಾವವನ್ನು ಬೀರಿರುತ್ತವೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ವಿಜ್ಞಾನಿಗಳು ಒಟ್ಟಾರೆ ಆಹಾರದ ಬಗ್ಗೆ ಮೂರು ವಿಷಯಗಳನ್ನು ಗಮನಿಸುತ್ತಾರೆ. ಮೊದಲನೆಯದಾಗಿ ಬಹಳ ಮುಖ್ಯವಾದ ವಿಷಯವೆಂದರೆ ಆಹಾರ ಯಾರಿಗೆ ಎಷ್ಟು. ಯಾವಾಗ ಸಿಗುತ್ತದೆ ಅನ್ನುವುದು. ಇದನ್ನು ನಾವು Food Security ಎಂದು ಹೇಳುತ್ತೇವೆ. ಎರಡನೆಯ ಅಂಶ ಆಹಾರ ಎಲ್ಲರಿಗೂ ಸಿಗುತ್ತದೆ ಆದರೆ ಅದರ ಗುಣಮಟ್ಟ ಹೇಗಿದೆ ಎನ್ನುವುದು. ಸಾಮಾನ್ಯವಾಗಿ ದೊಡ್ಡ ಹೋಟೆಲಿನಲ್ಲಿ ಗುಣಮಟ್ಟವೂ ಚೆನ್ನಾಗಿರುತ್ತದೆ ರುಚಿಯಾಗಿಯೂ ಇರುತ್ತದೆ ಎಂದು ಭಾವಿಸುವುದು ಸಹಜವೇ ಸರಿ. ಆದರೆ ನಾವು ಪಂಚತಾರ ಹೋಟೆಲಿನಲ್ಲೇ ತಿನ್ನಲಿ ಅಥವಾ ಬೀದಿ ಬದಿಯಲ್ಲೇ ತಿನ್ನಲಿ , ಅದರಿಂದ ನಮ್ಮ ದೇಹಕ್ಕೆ ದೊರಕುವಂತಹ ಪೋಷಕಾಂಶಗಳಲ್ಲಿ ಹೆಚ್ಚಿನ ವ್ಯತ್ಯಾಸ ಇರುವುದಿಲ್ಲ. ಅಂದರೆ, ಆಹಾರ ಸುರಕ್ಷತೆಯ ಜೊತೆಗೆ ಪೌಷ್ಠಿಕತೆಯ ಸುರಕ್ಷತೆ ಅನ್ನುವುದು ಕೂಡ ನಮಗೆ ಬಹಳ ಮುಖ್ಯವಾಗುತ್ತದೆ. ಕೊನೆಯದಾಗಿ ನಾವು ಆಹಾರವನ್ನು ಸಂಸ್ಕೃತಿಯ ಒಂದು ಅಂಗವಾಗಿ ಬಳಸುವುದರ ಬಗ್ಗೆ. ನೀವು ಯಾರ ಮನೆಗೇ ಹೋಗಿ, ಅಲ್ಲಿ ಅವರು ಮೊದಲು ಕಾಫಿ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಇದು ನಮ್ಮ ಸಂಸ್ಕೃತಿ.

ಹೀಗೆ ಈ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಆಹಾರ ಹೇಗಿರಬೇಕು ಎಂಬುದನ್ನು ನೋಡೋಣ. ಆಹಾರ ಎಲ್ಲರಿಗೂ ಸಿಗುತ್ತಿದೆಯೇ ಮತ್ತು ಅದರ ಗುಣಮಟ್ಟ ಹೇಗಿರಬೇಕು? ಪ್ರಪಂಚದಲ್ಲಿ ನಾಲ್ಕೈದು ದೇಶಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲ ಕಡೆ ಆಹಾರದ ಒಂದಲ್ಲ ಒಂದು ಕೊರತೆ ಇದ್ದೇ ಇದೆ. ಅದರಲ್ಲೂ ಭಾರತ ಹಾಗೂ ಕೃಷಿ ಮೂಲವಾದಂತಹ ಸಮಾಜಗಳಲ್ಲಿ ಈ ಸಮಸ್ಯೆ ಹೆಚ್ಚು.

ಮೊಟ್ಟ ಮೊದಲನೆಯದಾಗಿ, ನಾವು ವೈಯಕ್ತಿಕವಾಗಿ ಇಂಥದ್ದೇ ಆಹಾರ ಬೇಕು, ಅಕ್ಕಿ ಬೇಡ, ಮಿಲೆಟ್ಸ್ ಬೇಕು, ಸಿರಿಧಾನ್ಯಗಳೇ ಬೇಕು ಎಂದು ಎಲ್ಲರೂ ತೀರ್ಮಾನಿಸಿದರೆ, ನಮ್ಮೆಲ್ಲರಿಗೂ ಆ ಸಿರಿಧಾನ್ಯಗಳನ್ನು ಪೂರೈಸುವಷ್ಟು ಬೆಳೆಯುವ ಸಾಮರ್ಥ್ಯ ನಮಗಿದೆಯೇ ಎಂಬ ಪ್ರಶ್ನೆ ಮಾಡಬೇಕಾಗುತ್ತದೆ. ಇನ್ನು ಎರಡನೇ ಪ್ರಶ್ನೆಯೆಂದರೆ, ಈ ಸಿರಿಧಾನ್ಯಗಳಲ್ಲಿ ನಮಗೆ ಅವಶ್ಯಕವಾದ ಎಲ್ಲ ಪೌಷ್ಠಿಕಾಂಶಗಳು ಸಿಗದೇ ಹೋದರೆ ಕೊರತೆ ಇರುವಂತಹ ಅಂಶಗಳನ್ನು ನಾವು ಎಲ್ಲಿಂದ ತರಬಹುದು ಅನ್ನುವುದು. ಮೂರನೇ ವಿಷಯ ಬಹಳ ಮುಖ್ಯವಾದದ್ದು, ಸಿರಿಧಾನ್ಯಗಳನ್ನು ನಾವು ಬಳಸೋಣ ಅಂತ ತೀರ್ಮಾನಿಸಿದರೂ ಕೂಡ ಅದು ಎಲ್ಲರಿಗೂ ಒಗ್ಗುತ್ತದೆಯೇ? ಹಾಗೆ ಒಗ್ಗುವುದಕ್ಕೆ ಏನು ಮಾಡಬೇಕು? ಇದು ಸಾಧ್ಯವೇ? ಎನ್ನುವುದು. ಈ ದಿಶೆಯಲ್ಲಿ ಹಲವಾರು ಸಂಶೋಧನೆಗಳು, ಚಿಂತನೆಗಳು ನಡೆಯುತ್ತಿವೆ.

ನಮ್ಮ ತಲೆಮಾರಿನವರು 1970-80ರ ದಶಕದಲ್ಲಿ, ನಾವೆಲ್ಲರೂ ಚಿಕ್ಕವರಾಗಿದ್ದಾಗ ಮನೆಯಲ್ಲೇ ಅಡುಗೆ ಮಾಡಿ ಊಟ ಮಾಡುತ್ತಿದ್ದೆವು. ಆಗ ರೆಡಿ ಮಿಕ್ಸ್ ಎಂಬ ಕಲ್ಪನೆ ಕೂಡ ಇರಲಿಲ್ಲ. ಈ Ready Mix ಕಲ್ಪನೆ ಬಂದಿರುವುದಕ್ಕೂ ಹಲವಾರು ಕಾರಣಗಳಿವೆ. ಇದನ್ನು ಹೆಚ್ಚು ಕಾಲ ಇಡಬಹುದು. ಹಿಂದೆಲ್ಲ ಉಪ್ಪಿಟ್ಟು ಮಾಡಲು ಬರದೇ ಇರುವವನು ಯಾರು ಎಂದು ಕೇಳಿದ್ದುಂಟು. ಆದರೆ ಇಂದು ಅದಕ್ಕೂ ನಾವು ರೆಡಿ ಮಿಕ್ಸ್ ಉಪಯೋಗಿಸುವ ಕಾಲ ಬಂದಿದೆ. ಬರೇ ಉಪ್ಪಿಟ್ಟಲ್ಲ, ಇಂದು ಜನರು ಮನೆಯಲ್ಲೇ ತಯಾರಿಸಲಾಗುತ್ತಿದ್ದ ಸಾರು, ಸಾಂಬಾರ್, ಇತ್ಯಾದಿಗಳನ್ನು ಕೂಡ ರೆಡಿ ಮಿಕ್ಸ್ ರೂಪದಲ್ಲಿ ಕೊಂಡು ತಂದು ಬಿಸಿ ಮಾಡಿ ತಿನ್ನುತ್ತಿದ್ದಾರೆ. ಇಂದು ಅಂಗಡಿಯಿಂದ ತಂದು ಬಿಸಿ ಮಾಡಿ ತಿನ್ನುವ ಒಂದು ಸಮಾಜ ಸೃಷ್ಟಿಯಾಗಿದೆ.

ಹಿಂದೆ ನಾವು ಸಾಮಗ್ರಿಗಳನ್ನು ತಂದು ಮನೆಯಲ್ಲೇ ಆಹಾರವನ್ನು ತಯಾರು ಮಾಡಿದರೆ ಖರ್ಚು ಕಡಿಮೆ ಎನ್ನುತ್ತಿದ್ದೆವು. ಮನೆಯವರು ಅದಕ್ಕೆ ಪಡುತ್ತಿದ್ದ ಶ್ರಮಕ್ಕೆ ನಾವು ಯಾವುದೇ ಬೆಲೆಯನ್ನು ಕೊಡುತ್ತಿರಲಿಲ್ಲ. ಈ Ready Mix ಆಹಾರಗಳು ಸ್ವಲ್ಪ ದುಬಾರಿಯಾದರೂ ಇದನ್ನು ಉಪಯೋಗಿಸುವವರ ಬಗ್ಗೆ ಒಂದು ಅಧ್ಯಯನ ಮಾಡಿದಾಗ ಒಂದು ಸ್ವಾರಸ್ಯಕರವಾದ ವಿಷಯ ತಿಳಿಯಿತು. Instant Sambar Powder ಉಪಯೋಗಿಸುವವರಲ್ಲಿ ಸಾಕಷ್ಟು ಜನ ದಿನಗೂಲಿಗೆ ಹೋಗುವವರಿದ್ದರು. ಅವರಿಗೆ ಮನೆಯಲ್ಲಿ ಅಡುಗೆ ತಯಾರಿಸಲು ವ್ಯವಧಾನವಿರಲಿಲ್ಲ. ಆದ್ದರಿಂದ ಸ್ವಲ್ಪ ಹೆಚ್ಚಿನ ಹಣವನ್ನು ಖರ್ಚನ್ನು ಮಾಡಬೇಕಾದ ಪರಿಸ್ಥಿತಿಯಲ್ಲೂ ಅವರು ಈ ಆಯ್ಕೆಯನ್ನು ಮಾಡಿಕೊಂಡಿದ್ದಾರೆ. ಅಂದರೆ ತಮ್ಮ ಶ್ರಮವನ್ನು ಕಡಿಮೆ ಮಾಡುವಂಥ ಯಾವುದಕ್ಕೂ ಕೂಡ ಸ್ವಲ್ಪ ಮಟ್ಟಿಗೆ ಬೆಲೆ ಕೊಡುವುದಕ್ಕೆ ಅವರು ತಯಾರಿದ್ದಾರೆ ಎನ್ನುವುದು ಅರ್ಥವಾಯಿತು.

ಇಂತಹ ಪದಾರ್ಥಗಳು ಇಂದು ನಮ್ಮಲ್ಲಿ ವಿಪುಲವಾಗಿವೆ. ಇವುಗಳಲ್ಲಿ ಪೌಷ್ಠಿಕಾಂಶಗಳು ಕಡಿಮೆ ಎಂದೇನೂ ಅಲ್ಲ. ಇಂದು Instant Dosa Mix ಸಿಗುತ್ತದೆ. ಯಾಕೆ, ಹಿಟ್ಟೇ ಸಿಗುತ್ತದೆ. ಮನೆಯಲ್ಲಿ ರುಬ್ಬಿದರೆ ಅದನ್ನು ಒಂದೆರಡು ಮೂರು ದಿನ ಮಾತ್ರ ಇಡಬಹುದು. ನಂತರ ಅದು ಹುಳಿಯಾಗುತ್ತದೆ. ಹುಳಿಯಾದ ಹಿಟ್ಟಿನಿಂದ ದೋಸೆ ಅಥವಾ ಇಡ್ಲಿ ಮಾಡಿದರೆ ಅದರ ಸ್ವರೂಪವೇ ಬದಲಾಗಿ ಹೋಗುತ್ತದೆ. ಆದ್ದರಿಂದ ಒಂದು ಆಹಾರವನ್ನು ದಾಸ್ತಾನು ಮಾಡುವುದು, ಸಂಸ್ಕರಿಸುವಂಥದ್ದು ಇವೆಲ್ಲವಕ್ಕೂ ಒಂದಕ್ಕೊಂದು ಸಂಬಂಧ ಇರುತ್ತದೆ. ಹಿಂದೆಲ್ಲ ಮನೆಯಲ್ಲೇ ತಯಾರಿಸಿದ ಆಹಾರವನ್ನು ಅವತ್ತೇ ಉಪಯೋಗಿಸುತ್ತಿದ್ದೆವು ಮತ್ತು ಏನಾದರೂ ಮಿಕ್ಕಿದರೆ ಅದನ್ನು ದನಗಳಿಗೆ ಮತ್ತೊಂದಕ್ಕೆ ಕೊಡುತ್ತಿದ್ದೆವು. ಇಂತಹ ಒಂದು ಪದ್ಧತಿ ನಮ್ಮಲ್ಲಿತ್ತು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ನಾವು ನಮ್ಮ ಆಹಾರ ಪದ್ಧತಿಯನ್ನು ಬದಲಾಯಿಸಿಕೊಂಡ ಮೇಲೆ ಸಾಕಷ್ಟು ಆಹಾರವನ್ನು ವ್ಯರ್ಥ ಮಾಡುತ್ತಿದ್ದೇವೆ. ಉಳಿದರೆ ಅದನ್ನು ದನ ಮತ್ತೊಂದಕ್ಕೆ ಕೊಡಲೂ ಬರುವುದಿಲ್ಲ. ಯಾವ ರೀತಿಯ ಆಹಾರವನ್ನು ಬಳಸುತ್ತಾ ಇದ್ದೀವಿ ಅನ್ನುವುದರ ಜೊತೆಗೆ ಎಷ್ಟು ವ್ಯರ್ಥ ಮಾಡುತ್ತಿದ್ದೇವೆ ಎನ್ನುವುದನ್ನೂ ಗಮನಿಸಬೇಕಾಗುತ್ತದೆ.

ಈಗಾಗಲೇ ನಮ್ಮ ಆಹಾರವನ್ನು ನಾವು ಬೆಳೆದುಕೊಳ್ಳಲಾಗದ ಪರಿಸ್ಥಿತಿಯನ್ನು ತಲುಪಿಯಾಗಿದೆ. ನಮಗೆ ಬೇಕಾದ ಅಕ್ಕಿ, ಇತರ ಸಾಮಗ್ರಿಗಳು ಇಂದು ನಮ್ಮ ಊರಿನಲ್ಲಿ ಬೆಳೆಯುವುದೂ ಇಲ್ಲ. ಬೇರೆಲ್ಲೋ ಹಲವಾರು ಕಿ.ಮಿ. ದೂರದಲ್ಲಿರುವ ಯಾವುದೋ ಒಂದು ಹಳ್ಳಿಯಲ್ಲಿ ಬೆಳೆಯುತ್ತಾರೆ. ಅಲ್ಲಿಂದ ತರುವಂಥ ಪರಿಸ್ಥಿತಿ ಬಂದಿದೆ. ಇದು ಆಹಾರದ ಲಭ್ಯತೆಗೆ ಕೂಡ ಏಟು ಕೊಡುವಂತಹ ವಿಷಯ. ಮುಂದೆ ಹಂತ ಹಂತವಾಗಿ ನಾವು ಮನೆಯಲ್ಲಿ ಅಡುಗೆ ಮಾಡದೇ ಇರುವಂಥ ಪರಿಸ್ಥಿತಿ ಬರಬಹುದು. ಆಗ ನಮಗೆ ಹೊರಗಡೆ ಯಾವ ರೀತಿಯ ಆಹಾರ ಸಿಗಬಹುದು ಎಂಬುದು ಕೂಡ ಮುಖ್ಯವಾಗುತ್ತದೆ. ಹೆಚ್ಚು ಹೆಚ್ಚು ಆಹಾರ ಬೇಕು ಎಂಬ ವಿಷಯಕ್ಕೆ ಸಂಬಂಧಪಟ್ಟಂತೆ ವಿಜ್ಞಾನಿಗಳು ಹಸಿರು ಕ್ರಾಂತಿ ಸೇರಿದಂತೆ, ಹಲವಾರು ರೀತಿಯಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ. ಹಳೆಯ ಸಾವಯವ ಕೃಷಿಯನ್ನು ಹೊಸ

ಪುಟ 9 ರಲ್ಲಿ ಮುಂದುವರೆದಿದೆ

ಪುಟ 8 ರಿಂದ

ರೀತಿಯಲ್ಲಿ ಬಳಸಿಕೊಂಡು ಹೆಚ್ಚು ಉತ್ಪಾದನೆ ಮಾಡಲು ಸಾಧ್ಯವೇ ಅಥವಾ ಹಸಿರು ಕ್ರಾಂತಿ ಬಿಟ್ಟು ಜೈವಿಕ ತಂತ್ರಜ್ಞಾನವನ್ನು ಬಳಸಿಕೊಂಡು ಹೆಚ್ಚು ಹೆಚ್ಚು ಆಹಾರವನ್ನು ಉತ್ಪಾದನೆ ಮಾಡುವತ್ತಲೂ ಪ್ರಯೋಗಗಳು ನಡೆಯುತ್ತಿವೆ. ನಿಶ್ಚಯವಾಗಿ ಇದು ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಆದರೆ ಆಹಾರದ ಗುಣಮಟ್ಟದಲ್ಲಿಯೂ ವ್ಯತ್ಯಾಸವಿರುತ್ತದೆ. ಇಲ್ಲಿ ನಾನೊಂದು ಉದಾಹರಣೆಯನ್ನು ಕೊಡಲು ಇಚ್ಛಿಸುತ್ತೇನೆ. ಮೊನ್ನೆ ನಾನು ಒಂದು ಮದುವೆ ಮನೆಗೆ ಹೋದಾಗ ನನ್ನ ಪಕ್ಕದಲ್ಲಿದ್ದವರು ಬಾಳೆ ಎಲೆ ಮೇಲೆ ಬಡಿಸುತ್ತಿದ್ದನ್ನು ನೋಡಿ ನಮ್ಮ ಸಂಪ್ರದಾಯದ ಅಡುಗೆ ಹೇಗಿದೆ ಎಂದರು. ಅದರಲ್ಲಿ ಸಾಂಪ್ರದಾಯಿಕ ಅನ್ನುವುದು ಏನೂ ಇರಲಿಲ್ಲ. ಬಿ.ಜಿ.ಎಲ್ ಸ್ವಾಮಿಯವರು ಅದನ್ನು ನೋಡಿದ್ದರೆ ಯಾವ ಯಾವ ಸಾಮಗ್ರಿ ಎಲ್ಲಿಂದ ಬಂತು ಎಂದು ಹೇಳುತ್ತಿದ್ದರು. ಕ್ಯಾರೆಟ್ ಕೋಸಂಬರಿ – ಕ್ಯಾರೆಟ್ ನಮ್ಮದಲ್ಲ. ನಿತ್ಯ ಬಳಸುವಂಥ ಹಸಿಮೆಣಸಿನಕಾಯಿ ಕೂಡ ನಮ್ಮದಲ್ಲ. ಹೀಗೆ ಅದರಲ್ಲಿದ್ದಂಥ ಪದಾರ್ಥಗಳಲ್ಲಿ ಅಕ್ಕಿ, ತೆಂಗಿನಕಾಯಿ, ಹಾಲು ಬಿಟ್ಟು ಮಿಕ್ಕದೆಲ್ಲವೂ ಹೆಚ್ಚು ಕಡಿಮೆ ಬೇರೆ ಬೇರೆ ಕಾಲಘಟ್ಟದಲ್ಲಿ ನಮ್ಮ ದೇಶಕ್ಕೆ ಬಂದಂಥವು. ಆದರೆ ಅದನ್ನೇ ನಾವು ಎಷ್ಟರಮಟ್ಟಿಗೆ ಸಾಂಪ್ರದಾಯಿಕ ಅಡುಗೆ ಅಂದುಕೊಂಡಿದ್ದೇವೆ ಎಂಬುದೇ ಒಂದು ವಿಪರ್ಯಾಸ.

ಈಗ ನಾವು ತಂದುಕೊಂಡ ಬದಲಾವಣೆ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದರ ಬಗ್ಗೆ ಕೂಡ ನಾವು ಗಮನ ಹರಿಸಬೇಕು. ಇದಕ್ಕೆ ಸಂಬಂಧಪಟ್ಟಂತೆ ಒಂದು ಸಮಸ್ಯೆಯನ್ನು ಗಮನಿಸೋಣ. ಈಗ ರೆಡಿ ಫುಡ್ ಅಥವಾ ಜಂಕ್ ಫುಡ್ ಎನ್ನುವುದನ್ನು ಗಮನಿಸೋಣ. ಬೇಕೋ ಬೇಡವೋ ಸುಮ್ಮನೆ ಫ್ಯಾಷನ್ನಿಗಾಗಿ ತಿನ್ನುವ ಆಹಾರಕ್ಕೆ ಜಂಕ್ ಫುಡ್ ಅನ್ನುತ್ತೇವೆ. ಅದರಲ್ಲಿ ನಮಗೆ ಸ್ವಲ್ಪ ಮಟ್ಟಿಗೆ ಪೋಷಕಾಂಶಗಳು ಸಿಗುತ್ತೆವೆಯಾದರೂ ಅವಶ್ಯಕವಾದ ಎಲ್ಲ ಪೋಷಕಾಂಶಗಳು ಸಿಗುವುದಿಲ್ಲ ಎಂದು ಹೇಳಬಹುದು. ಇದರಲ್ಲಿ ಬಹಳ ಮುಖ್ಯವಾದದ್ದು ಪಾನೀಯಗಳು, ಪೇಯಗಳು, ಕೋಲಾ, ಫಾಂಟಾ, ಇತ್ಯಾದಿ. ಈ ಪೇಯಗಳು ಇಂದು ನಮ್ಮ ಸಮಾಜದಲ್ಲಿ ಎಷ್ಟರಮಟ್ಟಿ ಹಾಸುಹೊಕ್ಕಾಗಿವೆ ಎಂದರೆ ಇವು ಒಂದು ಸಂಸ್ಕೃತಿಯನ್ನೇ ಹುಟ್ಟಿಹಾಕಿವೆ ಎಂದರೆ ತಪ್ಪಾಗಲಾರದು. ಇಂತಹ 'ಸಂಸ್ಕೃತಿ' ಉದಯಿಸಿ ಪೌಷ್ಠಿಕತೆ ಇಲ್ಲದೇ ಇರುವಂಥ ಆಹಾರವನ್ನೇ ನಮ್ಮ ಸಂಸ್ಕೃತಿ ಎಂದು ಪರಿಗಣಿಸುವಂಥ ಹೊಸದೊಂದು ಪೀಳಿಗೆ ಬೆಳೆದರೆ ಆಗ ಏನು ಮಾಡುವುದು? ಈ ನಿಟ್ಟಿನಲ್ಲಿ ನಾವು ಹೆಚ್ಚು ಗಮನ ಹರಿಸಬೇಕು.

ಇನ್ನು ಕೃತಕ ಆಹಾರ ತಯಾರಿಸುವ ಹಲವಾರು ಪ್ರಯತ್ನಗಳು ಕೂಡ ನಡೆಯುತ್ತಿವೆ. ಉದಾಹರಣೆಗೆ ಮಾಂಸ ತಿನ್ನುವವರಿಗೆ ಮಾಂಸ ಬೇಡ ನೀವು ಸಸ್ಯಾಹಾರ ತಿನ್ನಿ ಎಂದು ಸಸ್ಯ ಮೂಲದಿಂದ ಮಾಂಸದ ರುಚಿಯನ್ನೇ ನೀಡುವಂಥ ಆಹಾರ ಪಧಾರ್ಥವನ್ನು ತಯಾರಿಸುವ ಪ್ರಯತ್ನ ಕೂಡ ನಡೆಯುತ್ತಿದೆ. ಸೂರ್ಯಕಾಂತಿ ಎಣ್ಣೆ ನಮಗೆ ಒಗ್ಗುವುದಿಲ್ಲ ಎಂದು ಅದರ ಸ್ವರೂಪವನ್ನೇ ಬದಲಾಯಿಸುವಂಥ ಪ್ರಯತ್ನಗಳು ನಡೆಯುತ್ತಿವೆ. ಅಂದರೆ ಅದು ಬೆಳೆಯುವಾಗಲೇ ಅದರ ಬೀಜ ರೂಪದಲ್ಲೇ ಬದಲಾವಣೆ ತರಲು ಸಾಧ್ಯವೇ ಎನ್ನುವುದನ್ನು ನೋಡುತ್ತಿದ್ದೇವೆ. ಈ ಎಲ್ಲ ಅಂಶಗಳು ಮುಂದೆ ನಮ್ಮ ಆಹಾರ ಹೇಗಿರಬಹುದು ಎನ್ನುವುದನ್ನು ನಿರ್ಧರಿಸುತ್ತವೆ.

ಈ ಆಹಾರ ಒಳ್ಳೆಯದು ಆ ಆಹಾರ ಒಳ್ಳೆಯದು ಎಂದು ಹೇಳುತ್ತ ಅದು ಬೇಡ ಇದು ಬೇಡ ಎಂದು ಹೇಳುತ್ತಿಲ್ಲ. ಆದರ ಜೊತೆಗೆ ನಮ್ಮ ಮುಂದಿನ ಪೀಳಿಗೆಯವರಿಗೆ ಯಾವ ರೀತಿಯ ಆಹಾರ ದೊರಕಬಹುದು, ಅದರಿಂದ ಯಾವ ರೀತಿಯ ಸಮಸ್ಯೆಗಳು ಉದ್ಭವಿಸಬಹುದು ಎನ್ನುವುದನ್ನು ಕೂಡ ಅವರಿಗೆ ಮನವರಿಕೆ ಮಾಡಿಕೊಡುವುದು ಅವಶ್ಯಕ. ಇಂದು ನಾವು ಮಾಡಬೇಕಾಗಿರುವುದೇನೆಂದರೆ, ನಮ್ಮ ಮುಂದಿನ ಪೀಳಿಗೆಯವರಿಗೆ ಆಹಾರದ ಬಗ್ಗೆ ಹೆಚ್ಚು ಹೆಚ್ಚು ತಿಳುವಳಿಕೆ ನೀಡುವಂಥದ್ದು. ಅವರ ಆಹಾರದ ಅಭ್ಯಾಸವನ್ನು ನಾವು ನಿರ್ದೇಶಿಸುವುದು ಬೇಡ, ಅವರ ಆಯ್ಕೆ ಅವರಿಗಿರಲಿ. ಆದರೆ ಸರಿಯಾದ ಆಹಾರದ ಆಯ್ಕೆಯ ಬಗ್ಗೆ ಅವರಿಗೆ ತಿಳಿಸಿಕೊಡಬೇಕು ಎಂದು ನನ್ನ ಭಾವನೆ.

# ಮನೆಬಾಗಿಲಿಗೆ ಬಂದ ಹರಿದಾಸರು!

ಪುಟ 5 ರಿಂದ

ಹೊರಟ ಪತಿಯೊಡನೆ ಗಿರಿಜಾ ತಾವು ಕಂಡ ಕನಸನ್ನೂ ನೆರೆಯ ವೈದ್ಯರವರು ಬಂದು ಹೇಳಿದ ಮಾತನ್ನೂ ವಿವರಿಸಿದರು. ಹೇಗೂ ಆಸ್ಪತ್ರೆಯಲ್ಲಿ ಮಗುವನ್ನು ನರ್ಸ್ ಗಳು ನೋಡಿಕೊಳ್ಳುತ್ತಾರೆ. ವೈದ್ಯರೂ ಅವರ ಜೊತೆಯವರೂ ಬಂದುಹೋಗುವವರೆಗೆ ಮನೆಯಲ್ಲೇ ಇರುವಂತೆ ಹೇಳಿದರು.

ಹೇಳಿದ ಹೊತ್ತಿಗೆ ಹರಿದಾಸ ವೇಷಧಾರಿಗಳ ಆಗಮನವಾಯಿತು. ಗಿರಿಜಾರವರಿಗೆ ಕನಸಿನಲ್ಲಿ ಸೂಚನೆ ಸಿಕ್ಕಂತೆ ಒಟ್ಟು ಎಂಟು ಜನರೇ ದಾಸರ ವೇಷದಲ್ಲಿ ಆಗಮಿಸಿದ್ದರು. ಶಾಸ್ತ್ರಿ ದಂಪತಿಯವರು ಅವರೆಲ್ಲರ ಕಾಲು ತೊಳೆದು ಪೂಜಿಸಿ, ಅವರ ಜೋಳಿಗೆಯೊಳಕ್ಕೆ ಆಹಾರಸಾಮಗ್ರಿಗಳನ್ನು ಒಪ್ಪಿಸಿದ್ದಾಯಿತು. ಬಂದವರು ಎದ್ದು ಹೊರಡುವ ಮುನ್ನ ಮೊದಲಿಗೆ ಗಿರಿಜಾರವರೇ ಮನೆಯಿಂದ ಹೊರಬಂದರು. ಹೊರಾವರಣದ ಕಳ್ಳಿಯ ಬೇಲಿಯ ನಡುವೆ ಇದ್ದ ಮರದ ಗೇಟಿಗೆ ಅಡ್ಡಲಾಗಿ ಅಂಬೆಗಾಲೂರಿ ಕುಳಿತರು.

ಬಂದ ಹರಿದಾಸರೆಲ್ಲ ತಮ್ಮ ಬೆನ್ನಮೇಲೆ ಕಾಲುತಾಗಿಸಿ ಹೋಗಬೇಕೆಂದು ಕೇಳಿಕೊಂಡರು. ಆದರೆ, ಆ ಸಾತ್ತ್ವಿಕ ಮಹಿಳೆಯ ಬೆನ್ನಿಗೆ ಕಾಲುತಾಗಿಸಲು ಯಾರೂ ಒಪ್ಪಲಿಲ್ಲ. ಈ ಅಪಚಾರಕ್ಕೆ ಮನಸ್ಸು ಒಪ್ಪುವುದಿಲ್ಲ ಎಂದುಬಿಟ್ಟರು. ಕೊನೆಗೆ ವೈದ್ಯರವರೇ ಉಳಿದವರನ್ನೆಲ್ಲ ಒಪ್ಪಿಸಲು ಮುಂದಾದರು. ಗಿರಿಜಮ್ಮ ತನಗೆ ತಂಗಿಯಿದ್ದ ಹಾಗೆ. ಆಕೆ ತನ್ನ ಮಗನನ್ನು ಅನಾರೋಗ್ಯದಿಂದ ರಕ್ಷಿಸಲು ಹೀಗೆ ದೀನಳಾಗಿ ಕೋರಿಕೆ ಸಲ್ಲಿಸುತ್ತಿದ್ದಾರೆ. ಅವರ ಮಾತಿಗೆ ಮನ್ನಣೆ ಕೊಡಬೇಕಾದುದು ತಮ್ಮ ಕರ್ತವ್ಯ. ಮಹಿಳೆಯೊಬ್ಬಳ ಬೆನ್ನಮೇಲೆ ಕಾಲಿಡುವುದು ಅಪಚಾರವೇ ಹೌದು. ಆದರೆ, ಈ ಸಂದರ್ಭದಲ್ಲಿ ಕಿಂಚಿತ್ ಪಾದಸ್ಪರ್ಶವಾಗುವುದರಿಂದ ಆಕೆಗೂ ಆಕೆಯ ಕುಟುಂಬಕ್ಕೂ ಕ್ಷೇಮಸಾಧನೆಯಾಗುವುದಾದರೆ ದೋಷವೆಂದು ಪರಿಗಣಿತವಾಗುವುದಿಲ್ಲ ಎಂದರು. ಬಂದವರೆಲ್ಲರೂ ಗಿರಿಜಾ ಶಾಸ್ತ್ರಿಯವರ ಬೆನ್ನಿಗೆ ಪಾದತಾಗಿಸಿದ ಶಾಸ್ತ್ರ ಮಾಡಿ ಹೊರಟರು. ಕನಸಿನಲ್ಲಿ ತನಗೆ ಒದಗಿದ ಆದೇಶ ಹೀಗೆ ಫಲಿಸಿದ ಬಗೆಗೆ ಗಿರಿಜಾ ಸಮಾಧಾನಪಟ್ಟುಕೊಂಡರು.

ಸಂಜೆ ಗಿರಿಜಾ ಶಾಸ್ತ್ರಿಯವರು ಆಸ್ಪತ್ರೆಗೆ ಹೋದಾಗ ಡಾಕ್ಟರ್ ಎದುರಿಗೆ ಸಿಕ್ಕರು. ಹಸನ್ಮುಖರಾಗಿದ್ದ ಡಾಕ್ಟರರು, “ನಿಮ್ಮ ಅದೃಷ್ಟ ಚೆನ್ನಾಗಿತ್ತು ಗಿರಿಜಾರವರೇ. ನಿಮ್ಮ ಮಗನಿಗೆ ಆಗಿರುವ ಪೋಲಿಯೋ ತುಂಬ ತೀವ್ರವಾದ ಕಾಯಿಲೆ ಅಲ್ಲ, ಗುಣಪಡಿಸಬಹುದು” ಎಂದಾಗ ಗಿರಿಜಾರವರಿಗೆ ಸ್ವರ್ಗ ಕೈಗೆಟುಕಿದಂತಾಯಿತು. “ಲಕ್ಷದಲ್ಲೊಬ್ಬರಿಗೆ ಇಂಥ ಭಾಗ್ಯ ಲಭಿಸುತ್ತದೆ, ನೀವು ಅದೃಷ್ಟಶಾಲಿಗಳು” ಎಂದು ಮಾತು ಮುಂದುವರಿಸಿದ ಡಾಕ್ಟರರು “ಆದರೆ ಮುಂದಿನ ಒಂದು ವರ್ಷ ನೀವು ಮಗುವನ್ನು ತುಂಬ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಮಗುವನ್ನು ನೆಲಕ್ಕೆ ಬಿಡದ ಹಾಗೆ , ನಡೆಯದ ಹಾಗೆ ಎಚ್ಚರವಹಿಸಬೇಕು. ತೊಡೆಯ ಮೇಲೆ ಕೂರಿಸಿಕೊಂಡೇ ಕಾಪಾಡಿಕೊಳ್ಳಿ. ಮುಂದೆ ಪೋಲಿಯೋ ತೊಂದರೆಯೇನೂ ಬಾಧಿಸುವುದಿಲ್ಲ” ಎಂದು ಸೂಚನೆಕೊಟ್ಟರು.

ಶಾಸ್ತ್ರಿ ದಂಪತಿ ಡಾಕ್ಟರರ ಸಲಹೆಸೂಚನೆಗಳನ್ನು ಬಲು ಜಾಗ್ರತೆವಹಿಸಿ ಪಾಲಿಸಿದರು. ಅನಂತಕುಮಾರನ ತಮ್ಮ ತಂಗಿಯರನ್ನು ಶಾಲೆಗೆ ಕಳುಹಿಸುತ್ತಿದ್ದ ಗಿರಿಜಾರವರು ಅನಂತನನ್ನು ತೊಡೆಯ ಮೇಲೆಯೇ ಕೂರಿಸಿಕೊಂಡು ಪಾಠ ಹೇಳಿಕೊಡುತ್ತಿದ್ದರು. ತಾಯಿಯ ಶ್ರದ್ಧೆಯ ಫಲವಾಗಿ ವರ್ಷ ಕಳೆಯುವುದರೊಳಗೆ ಅನಂತಕುಮಾರ ಅಪಾಯದಿಂದ ಸಂಪೂರ್ಣವಾಗಿ ಪಾರಾದ. ಮುಂದಿನ ರಾಮನವಮಿಯ ಹೊತ್ತಿಗೆ ಎಲ್ಲ ಮಕ್ಕಳಂತೆ ಸಹಜವಾಗಿ ಓಡಾಡತೊಡಗಿ ತಾಯ್ತಂದೆಯರ ಕಣ್ಣುಗಳಿಗೆ ಹಬ್ಬವುಂಟುಮಾಡಿದ.

ಮುಂದೊಮ್ಮೆ ಅನಂತಕುಮಾರರ ನಡಿಗೆಯ ವೇಗಕ್ಕೆ ಸಮನಾಗಿ ಹೆಜ್ಜೆಹಾಕಲಾರದೆ ಯಾರೋ ಒಬ್ಬರು “ಸರ್, ನಿಮ್ಮ ನಡಿಗೆಯ ಸಮನಾಗಿ ನಮಗೆ ನಡಿಯೋದಕ್ಕಾಗಲ್ಲ, ನಾವು ಓಡಿಕೊಂಡೇ ಬರಬೇಕು” ಎಂದು ಏದುಸಿರು ಬಿಡುವಾಗ, ಅನಂತಕುಮಾರ್ ಮುಗುಳ್ನಕ್ಕು “ಇದರ ಕೀರ್ತಿಯೆಲ್ಲ ನನ್ನ ತಾಯಿಗೆ ಸಲ್ಲಬೇಕು” ಎಂದರು!

## ಅನಂತಪಥ

Editor: **Gopal T.S** | Layout: **Abhishek Gubbi Creatives**
Sketches: **Raghupathi Sringeri** | Assistance: **K . Janardhana Thunga** | **H. R. Prakash** | Inputs: **Poornaprajna** | **Sreelakshmi Vishwanath** | **Chaya Bapat**
Photographs: **Ananthkumar Prathisthana** | **Adamya Chethana**
Printed at: **Rashtrothana Mudranalaya, Chamrajpet, Bengaluru** | Published by: **Dr. Tejaswini Ananthkumar**
For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04
Ph: 080 26568484 | Email: ananth.path@akp.org.in
**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು;
ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.
To get a e-version of this periodical SMS your name and place to 8884182415

# ಸಾರ್ವಜನಿಕ ಜೀವನಕ್ಕೆ ಕೃತಕ ಬುದ್ಧಿಮತ್ತೆಯ (Artifical Intelligence – ಎಐ) ಕೊಡುಗೆ

**ಡಾ.ರಜತ್ ಮೂನ**
ಪ್ರೊಫೆಸರ್, ಐಐಟಿ, ಕಾನ್ಪುರ್



ಮೊದಲಿಗೆ, ಕಾರ್ಬನ್ ಮತ್ತು ಸಿಲಿಕಾನ್ ಎಂಬ ಎರಡು ಧಾತುಗಳನ್ನು ಗಮನಿಸೋಣ. ಎರಡೂ ಕೂಡ ಗ್ರೂಪ್14ರ ಧಾತುಗಳು. ಕಾರ್ಬನ್ ಹಲವಾರು ಬಿಲಿಯನ್ ವರ್ಷಗಳ ಹಿಂದೆಯೇ ನೆಲೆಗೊಂಡಿದೆ. ಆದರೆ ಸಿಲಿಕಾನ್ ಕೇವಲ ಕಳೆದ 80-100 ವರ್ಷಗಳಿಂದ ಬಳಕೆಯಲ್ಲಿದೆ ಮತ್ತು ಇದು ನಮ್ಮೆಲ್ಲರಿಗೂ ಬಹಳ ದೊಡ್ಡ ಪ್ರಮಾಣದ ಗಣಿಕೆಯ, ಶೋಧನೆಯ ಸಾಮರ್ಥ್ಯವನ್ನು ನೀಡಿದೆ. ಒಂದು ಮಾನವ ಜೀವಿ, ಗಿಡಮರಗಳು ಮತ್ತು ಪ್ರಾಣಿಗಳನ್ನು ಪ್ರತಿನಿಧಿಸಿದರೆ ಇನ್ನೊಂದು ಎಲೆಕ್ಟ್ರಾನಿಕ್ಸ್ ಮತ್ತು ಎಣಿಕೆಯನ್ನು/ಶೋಧನೆಯನ್ನು ಪ್ರತಿನಿಧಿಸುತ್ತದೆ. ಒಂದು ಭಗವಂತನ ಸೃಷ್ಟಿ ಮತ್ತು ಇನ್ನೊಂದು ಮಾನವನ ಸೃಷ್ಟಿ. ಸಹಜ ಬುದ್ಧಿಮತ್ತೆ ಮತ್ತು ಕೃತಕ ಬುದ್ಧಿಮತ್ತೆಗಳೂ ಹೀಗೆಯೇ.

ನಾನು ಕೃತಕ ಬುದ್ಧಿಮತ್ತೆ ಅನ್ನು ಕೃತಕ ಬುದ್ಧಿಮತ್ತೆ ಎಂದು ಹೇಳುವುದಿಲ್ಲ, ಏಕೆಂದರೆ ಅದರಲ್ಲಿ ಯಾವುದೇ ಕೃತಕತೆಯಿಲ್ಲ. ವಸ್ತುತಃ ಅದು ಬುದ್ಧಿಮತ್ತೆಯ ವಿಸ್ತರಣೆ ಅಥವಾ ಸ್ವಾಭಾವಿಕ ಬುದ್ಧಿಮತ್ತೆಯ ವಿಸ್ತರಣೆ. ಇಂದು ಇಡೀ ಆಡಳಿತ ವ್ಯವಸ್ಥೆಯೇ ಎಐ ಮೇಲೆ ನಿರ್ಭರಿತವಾಗಿದೆ. ಸಹಜ ಬುದ್ಧಿವಂತರಿಗೆ ಕೇವಲ ದತ್ತಾಂಶವನ್ನು ನೋಡಿ ಅದರ ಸುತ್ತಲಿರುವ ಅಂಕಿಅಂಶಗಳನ್ನು ಮತ್ತು ಸೂಚನೆಗಳನ್ನು ತಿಳಿದು ಒಂದು ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ. ಈಗ ಕೃತಕ ಬುದ್ಧಿಮತ್ತೆ ಅವರ ನೆರವಿಗೆ ಬಂದಿದೆ. ಕೃತಕ ಬುದ್ಧಿಮತ್ತೆಯ ಸಹಾಯದಿಂದಾಗಿ ಅವರು ವಸ್ತುತಃ ದತ್ತಾಂಶದಲ್ಲಿರುವ ಅರ್ಥಪೂರ್ಣವಾದ ಮಾಹಿತಿಯನ್ನು ತಿಳಿದು ಸರಿಯಾದ ಮಾರ್ಗವನ್ನು/ನಿರ್ಧಾರವನ್ನು ತೆಗೆದುಕೊಳ್ಳಬಹುದಾಗಿದೆ.

ಇಂದು ಬುದ್ಧಿಮತ್ತೆಯನ್ನು ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಔಷಧಿಗಳ ಆವಿಷ್ಕಾರದಲ್ಲಿ, ಉತ್ತಮ ನಿರ್ಧಾರಕ್ಕಾಗಿ, ಸ್ವಯಂಚಾಲಿತ ರೋಗನಿರ್ಣಯ, ಜ್ಞಾನಗ್ರಹಣ ಕಲಿಕೆ, ಆರೋಗ್ಯದ ನಿರ್ವಹಣೆಗಾಗಿ ಉಪಯೋಗಿಸಲಾಗುತ್ತಿದೆ . ಕೃಷಿ ಕ್ಷೇತ್ರದಲ್ಲಿ, ಹವಾಮಾನ ಮುನ್ಸೂಚನೆಗೆ, ವಿಪತ್ತಿನ ನಿರ್ವಹಣೆಗೆ, ಸಾಗಾಣಿಕೆಯಲ್ಲಿ, ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಮಾನವಕೋಟಿಯ ಸಂರಕ್ಷಣೆಗಾಗಿ, ಉತ್ತಮ ಸ್ವಾಸ್ಥ್ಯಕ್ಕಾಗಿ, ಉತ್ತಮ ಕಲಿಕೆಗಾಗಿ, ದಿನನಿತ್ಯದ ಓಡಾಟಕ್ಕಾಗಿ ವ್ಯಾಪಕವಾಗಿ ಬಳಸಲಾಗುತ್ತಿದೆ. ಉದಾಹರಣೆಗೆ ಹವಾಮಾನ ಮುನ್ಸೂಚನೆಯನ್ನು ಈಗ ನಾವು ಕನಿಷ್ಠ ಪಕ್ಷ ಒಂದು ವಾರದ ಮುನ್ನವೇ ತಿಳಿದು ಅಗತ್ಯವಾದ ಪರಿಹಾರೋಪಾಯವನ್ನು ತೆಗೆದುಕೊಳ್ಳಬಹುದು.

ಇಂದು ಎಲ್ಲರೂ ಕೃತಕ ಬುದ್ಧಿಮತ್ತೆ ಬಗ್ಗೆಯೇ ಮಾತನಾಡಲಾರಂಭಿಸಿದ್ದಾರೆ . ಚಾಲಕರಹಿತ ವಾಹನಗಳು; ಮನೆಬಾಗಿಲಿಗೆ ವಿತರಣೆ, ತತ್ ಕ್ಷಣದ ಅನುವಾದ- ಹೀಗೆ ಕೃತಕ ಬುದ್ಧಿಮತ್ತೆ ಎಲ್ಲ ಕ್ಷೇತ್ರಗಳಲ್ಲೂ ವ್ಯಾಪಿಸಿದೆ. ಉದಾಹರಣೆಗೆ ಊಬರ್, ಓಲಾ ಸೇವೆಯನ್ನೇ ತೆಗೆದುಕೊಳ್ಳಿ. ನೀವು ಕುಳಿತಲ್ಲಿ, ನಿಂತಲ್ಲಿ ಎಲ್ಲಿಗೆ ಹೋಗಬೇಕೆಂದಿರುವಿರೋ ಅಲ್ಲಿಗೆ ಟ್ಯಾಕ್ಸಿ, ಆಟೋ ಬುಕ್ ಮಾಡಬಹುದು. ಗೂಗಲ್ ಮ್ಯಾಪ್ ಉಪಯೋಗಿಸಿ ನಮಗೆ ಪರಿಚಿತವಿಲ್ಲದ ಸ್ಥಳವನ್ನು ಸೇರಬಹುದು. ಅದು ಯಾವ ರಸ್ತೆಯಲ್ಲಿ ವಾಹನ ಸಂಚಾರ ದಟ್ಟವಾಗಿದೆ ಎಂದು ಕಂಡುಹಿಡಿದು ನಿಮಗೆ ಬದಲಿ ಮಾರ್ಗವನ್ನು ಕೂಡ ಸೂಚಿಸುತ್ತದೆ. ಹತ್ತಿರದ ದಾರಿಯಲ್ಲಿ ಪ್ರಯಾಣ, ಕಡಿಮೆ ಅಪಘಾತಗಳು, ಕೆಂಪು ದೀಪಗಳ ಮುಂದಿನ ಕಡಿಮೆ ನಿರೀಕ್ಷಣೆ, ಕಡಿಮೆ ಇಂಧನದ ಬಳಕೆ, ಸ್ವಯಂಚಾಲಿತ ಕಾರುಗಳು, ವಾಹನಗಳು ಇವೆಲ್ಲವಕ್ಕೂ ಕೃತಕ ಬುದ್ಧಿಮತ್ತೆ ನಮಗೆ ಸಹಾಯ ಮಾಡಬಹುದು. ಇದಕ್ಕೆ ನಾವು ಬಹಳ ದಿನ ಕಾಯಬೇಕಾಗಿಲ್ಲ, ಅನ್ವೇಷಣೆಯ ಕಾರ್ಯ ಈಗಾಗಲೇ ಪ್ರಗತಿಯಲ್ಲಿದೆ.

ಪ್ರಸ್ತುತ ಈ ವರ್ಷದಲ್ಲಿ ಶೈಕ್ಷಣಿಕ ಶ್ರೇಣೀಕರಣ ಮತ್ತು ನಿರ್ಧಾರ ಒಂದು ಸವಾಲಿನ ಕೆಲಸವಾಗಿತ್ತು. ಕೋವಿಡ್ ಶಿಕ್ಷಣ ಕ್ಷೇತ್ರವನ್ನು ಅತಿದೀನ ಸ್ಥಿತಿಗೆ ತಂದು ನಿಲ್ಲಿಸಿತ್ತು. ಆದರೆ, ದಿನಬೆಳಗಾಗುವುದರಲ್ಲಿ ಎಲ್ಲರೂ ಆನ್ ಲೈನ್ ಶಿಕ್ಷಣಕ್ಕೆ ಬದಲಾಯಿಸಿಕೊಂಡರು. ಕೃತಕ ಬುದ್ಧಿಮತ್ತೆಯ ಅನ್ವಯದಿಂದ ಇದು ಸಾಧ್ಯವಾಯಿತು. ಆನ್ ಲೈನ್ ಪರೀಕ್ಷೆಗಳು, ಆನ್ ಲೈನ್ ನಿರ್ಧಾರಣೆ, ಯಂತ್ರಾಧಾರಿತ ಶ್ರೇಣೀಕರಣ, ಆನ್ ಲೈನ್ ಶಿಕ್ಷಣ ವ್ಯವಸ್ಥೆ, ಆನ್ ಲೈನ್ ವಿಡಿಯೋ ಸಮಾಲೋಚನೆ, ಹೀಗೆ ಹತ್ತು ಹಲವಾರು ಅನುಕೂಲಗಳನ್ನು ಕೃತಕ ಬುದ್ಧಿಮತ್ತೆ ನಮಗೆ ಒದಗಿಸಿದೆ. ವೆಬ್ಎಕ್ಸ್ ಒಂದು ಕೃತಕ ಬುದ್ಧಿಮತ್ತೆ ಆಧಾರಿತ ವ್ಯವಸ್ಥೆ. ಇಲ್ಲಿ ದೊಡ್ಡ ಪ್ರಮಾಣದಲ್ಲಿ ಧ್ವನಿ/ಶಬ್ದದ ನಿರ್ವಹಣೆ ಮತ್ತು ನಿರೂಪಣೆ ಸಾಧ್ಯವಾಗಿದೆ. ಭವಿಷ್ಯದಲ್ಲಿ ವೈಯಕ್ತಿಕ ಗುರುತಿಸಿಕೊಳ್ಳುವಿಕೆ, ಪರಿಗ್ರಾಹಕ ಪಾಠಗಳ ಕಲಿಕೆ, ತೀರ್ಗಡೆ ಹೊಂದುವ ಸಾಮರ್ಥ್ಯ ಮೊದಲಾದವುಗಳನ್ನು ನಿರ್ಧರಿಸಲು ಕೃತಕ ಬುದ್ಧಿಮತ್ತೆ ನಮಗೆ ಸಹಾಯ ಮಾಡುತ್ತದೆ.

ಇಂದು ಸ್ವಯಂಚಾಲಿತ ಚೆಕ್ ಪ್ರೋಸೆಸಿಂಗ್ ಯಂತ್ರದ ಬಗ್ಗೆ ಮಾತನಾಡುತ್ತಿದ್ದೇವೆ. ಇದು ಬಹಳ ಹಿಂದಿನಿಂದಲೂ ಬಳಕೆಯಲ್ಲಿದೆ. ಆದರೆ ಈಗ ಸಹಿಯನ್ನು ಹೊಂದಿಸುವ ಮತ್ತು ಅಂತಹ ಇತರ ವಿಷಯಗಳಿಗೆ ಸಂಬಂಧಪಟ್ಟಂತೆ ದೊಡ್ಡ ಪ್ರಮಾಣದಲ್ಲಿ ಕೃತಕ ಬುದ್ಧಿಮತ್ತೆ ಅನ್ನು ಬಳಕೆಗೆ ತರಲಾಗಿದೆ. ಎಟಿಎಂ ಆಧಾರಿತ ವ್ಯವಹಾರಕ್ಕೆ ಕೃತಕ ಬುದ್ಧಿಮತ್ತೆ ಅನ್ನು ಬಳಸಲಾಗುತ್ತಿದೆ. ಬ್ಯಾಂಕಿಂಗಿನ ಇನ್ನೊಂದು ವಿಭಾಗವೆಂದರೆ ಸಾಲ ಮತ್ತು ಸಾಲ ಪಡೆಯಲು ಅರ್ಹರೋ ಇಲ್ಲವೋ ಎಂದು ತಿಳಿಯುವ ವ್ಯವಸ್ಥೆ. ಇಲ್ಲಿ ಕೂಡ ನಾವು ವ್ಯವಹಾರ ದಗಾ ವ್ಯವಹಾರವೋ ಅಥವಾ ಪ್ರಾಮಾಣಿಕವಾದದ್ದೋ ಎಂದು ತಿಳಿಯಲು ದೊಡ್ಡ ಪ್ರಮಾಣದಲ್ಲಿ ಕೃತಕ ಬುದ್ಧಿಮತ್ತೆ ಅನ್ನು ಬಳಸಬೇಕಾಗುತ್ತದೆ.

ಇನ್ನು ಹಲವಾರು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಕ್ತಿಗಳು ಒಬ್ಬರನ್ನೊಬ್ಬರು ಸಂಪರ್ಕಿಸುವುದರ ಬಗ್ಗೆ ಗಮನ ಹರಿಸೋಣ. ಫೇಸ್ಬುಕ್ ತಾನೇ ತಾನಾಗಿ ಫೋಟೋಗಳನ್ನು, ಹೆಸರುಗಳನ್ನು ಗುರುತಿಸುವ ತಂತ್ರಕೌಶಲವನ್ನು ನೀಡುತ್ತದೆ. ಇನ್ನು ಇನ್ಸ್ಟಾಗ್ರಾಂಗೆ ಬಂದರೆ, ನೀವು ಹೆಚ್ಚು ಸುಂದರವಾಗಿ ಕಾಣಲು ನಿಮ್ಮ ಪ್ರತಿಬಿಂಬದ ರೂಪವನ್ನು ಹೆಚ್ಚಳ ಮಾಡುವಂತಹ ತಂತ್ರಕೌಶಲವನ್ನು ಹೊಂದಿದೆ. ಇವೆಲ್ಲದರಲ್ಲೂ ದೊಡ್ಡ ಪ್ರಮಾಣದಲ್ಲಿ ಕೃತಕ ಬುದ್ಧಿಮತ್ತೆ ಬಳಕೆಯಾಗಿದೆ. ಅಧುನಿಕ ಕ್ಯಾಮರಾ, ಟ್ರಿಪಲ್ ಕ್ಯಾಮರಾ, ಕ್ವಾರ್ಟ್ಜ್ ಕ್ಯಾಮರಾ, ಡಬಲ್ ಕ್ಯಾಮರಾ ಇವುಗಳೆಲ್ಲದರಲ್ಲೂ ದೊಡ್ಡ ಪ್ರಮಾಣದಲ್ಲಿ ಕೃತಕ ಬುದ್ಧಿಮತ್ತೆ ಅನ್ನು ಉಪಯೋಗಿಸಲಾಗಿದೆ. ಅಮೆಜಾನ್ ನ ಅಲೆಕ್ಸಾ, ಗೂಗಲ್ ಅಸಿಸ್ಟೆಂಟ್, ಕ್ರೊಟೊನಾ, ಸಿಡಿ ಹೀಗೆ ಹಲವಾರು ಮೊಬೈಲ್ಆಪ್ ಗಳನ್ನು ನಾವು ನೋಡಿದ್ದೇವೆ. ಮಾತಿನಿಂದ ಪಠ್ಯಕ್ಕೆ, ಅನುವಾದ, ಸ್ಮಾರ್ಟ್ ಫೋನ್ ಗಳು, ಇತ್ಯಾದಿಗಳಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ದೊಡ್ಡ ಪ್ರಮಾಣದಲ್ಲಿದೆ.

ಬಯೋ-ಮೆಟ್ರಿಕ್ಸ್ ವ್ಯಕ್ತಿಯ ಗುರುತಿನ ರಕ್ಷಣೆ, ಮುಖ ನೋಡಿ ಗುರುತಿಸುವುದು, ಇತ್ಯಾದಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಕೃತಕ ಬುದ್ಧಿಮತ್ತೆಯನ್ನು ಉಪಯೋಗಿಸಲಾಗಿದೆ. ಮೆಷಿನ್ ಲರ್ನಿಂಗ್(ಎಂಎಲ್) ಅಂದರೆ ಆ ಯಂತ್ರಕ್ಕೆ ಮನುಷ್ಯನ ಚಿತ್ರವನ್ನು ಹಾಕಿ ಅವನನ್ನು ಗುರುತಿಸುವುದು. ಎಂಎಲ್ಇನ್ನೂ ಅನೇಕ ಸಾಮರ್ಥಗಳನ್ನು ಹೊಂದಿದೆ. ಉದಾಹರಣೆಗೆ ದತ್ತಾಂಶದ ಭದ್ರತೆಯ ಸಮಸ್ಯೆ. ಮಾಲ್ ವೇರ್ಗಳು ಅಂದರೆ ಕಂಪ್ಯೂಟರ್ ವೈರಸ್ ಗಳು ಬಹಳ ಹೆಚ್ಚಾಗುತ್ತಿವೆ. ಈ ಮಾಲ್ವೇರ್ ಗಳು ದಾಳಿ ಮಾಡಿ ದತ್ತಾಂಶವನ್ನು ಹಾಳು ಮಾಡುತ್ತವೆ. ಇದನ್ನು ತಡೆಯಲು ಕೃತಕ ಬುದ್ಧಿಮತ್ತೆಯ ಬಳಕೆ ವ್ಯಾಪಕವಾಗಿ ನಡೆಯುತ್ತಿದೆ. ಇನ್ನು ವೈಯಕ್ತಿಕ ಭದ್ರತೆ - ವಿಮಾನ ನಿಲ್ದಾಣಗಳಲ್ಲಿ, ಮೆಟ್ರೋಗಳಲ್ಲಿ, ರೈಲುಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಅಪಾಯದ ಸೂಚನೆಯನ್ನು ಗುರುತಿಸಿ ಪರಿಹಾರೋಪಾಯವನ್ನು ತೆಗೆದುಕೊಳ್ಳಲು ಕೃತಕ ಬುದ್ಧಿಮತ್ತೆ ಉಪಯೋಗಿಸಿ ಎಂಎಲ್ ಲರ್ನಿಂಗ್ ರೂಪದಲ್ಲಿ ಅವಶ್ಯಕ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಭೂಕಂಪನದ ಅನ್ವೇಷಣೆಯ ಉದ್ಯಮ ಮೈಗ್ರೇಷನ್, ಇನ್ವರ್ಷನ್ ಮತ್ತು ಮಾಡೆಲಿಂಗ್ ನಂತಹ ಗಣಕ ಯಂತ್ರ ಆಧಾರಿತ ತಂತ್ರಗಳನ್ನು ಶಕ್ತಿ ನಿಕ್ಷೇಪಗಳನ್ನು ಅಂದರೆ ಭೂಮಿಯ ಕೆಳಗೆ ಅನಿಲ, ಎಣ್ಣೆ, ಏನಿದೆ ಎಂದು ಹುಡುಕಲು ಉಪಯೋಗಿಸುತ್ತಿದೆ.

ಇನ್ನು ಆರೋಗ್ಯ ನಿರ್ವಹಣೆಗೆ ಕೃತಕ ಬುದ್ಧಿಮತ್ತೆಯ ಕೊಡುಗೆ ಏನು ಎಂದು ಗಮನಿಸಬಹುದು. ಪ್ಯಾಥಾಲಜಿ (ರೋಗಲಕ್ಷಣ ಶಾಸ್ತ್ರ)ಯ ಮೇಲೆ ಸಾಕಷ್ಟು ಪ್ರಯೋಗಗಳು ನಡೆದಿವೆ. ಎಕ್ಸ್ ರೇ ನೋಡಿ ಬೋನ್ ಡೆನ್ಸಿಟಿ ಸಮಸ್ಯೆಯಿದೆಯೇ, ಮೂಳೆ ಬಿರುಕು ಬಿಟ್ಟಿದೆಯೇ ಎಂಬುದನ್ನು ಒಬ್ಬ ರೇಡಿಯಾಜಲಿಸ್ಟ್ ಗಿಂತ ಕರಾರುವಾಕ್ಕಾಗಿ ಕೃತಕ ಬುದ್ಧಿಮತ್ತೆ ಉಪಕರಣ ತಿಳಿಸುತ್ತದೆ. ಅಷ್ಟೇ ಅಲ್ಲದೆ, ಗೆಡ್ಡೆಗಳು, ಖಿನ್ನತೆ, ಇತ್ಯಾದಿಗಳನ್ನು ನಿರ್ಣಯಿಸಲು ಸಹ ಕೃತಕ ಬುದ್ಧಿಮತ್ತೆ ಸಹಾಯ ಮಾಡುತ್ತದೆ. ಮಿದುಳಿನ ಗೆಡ್ಡೆಗಳ ಶಸ್ತ್ರಚಿಕಿತ್ಸೆಗೆ ಗಾಮಾ ನೈಫ್ ಶಸ್ತ್ರಚಿಕಿತ್ಸಾ ವಿಧಾನವನ್ನು ಬಳಸಲಾಗುತ್ತದೆ. ಇದರಲ್ಲಿ ಮಿದುಳನ್ನು ತೆರೆಯದೆಯೇ ಲೇಸರ್ ಮೂಲಕ ಶಸ್ತ್ರಕ್ರಿಯೆಯನ್ನು ಮಾಡಬಹುದು. ಇದು ಕೂಡ ಕೃತಕ ಬುದ್ಧಿಮತ್ತೆಯ ಒಂದು ವಿಶಿಷ್ಟ ಕೊಡುಗೆ. ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಸಾರ್ವಜನಿಕ ಜೀವನದಲ್ಲಿ ಕೃತಕ ಬುದ್ಧಿಮತ್ತೆ ತನ್ನ ಅಪಾರ ಕೊಡುಗೆಯನ್ನು ನೀಡಿದೆ, ಭವಿಷ್ಯದಲ್ಲೂ ಇದರ ಪ್ರಯೋಜನ ಅಧಿಕವಾಗಿ ಒದಗಲಿದೆ.

(ಅನಂತಕುಮಾರ್ ಪ್ರತಿಷ್ಠಾನವು ಏರ್ಪಡಿಸಿದ್ದ ರಾಷ್ಟ್ರೀಯ ಸಂವಾದ ವೆಬಿನಾರ್ ಕಾರ್ಯಕ್ರಮದಲ್ಲಿ ಮಾಡಿದ ಭಾಷಣದ ಸಾರಾಂಶ.)

ನೆನಪಿನ ಅಂಗಳದಿಂದ

# ಮಗಳ ಮದುವೆಯ ನೆನಪುಗಳು

ನಿರೂಪಣೆ: ಶ್ರೀಮತಿ ಪ್ರತಿಭಾ ಓಕ್

ನನ್ನ ಮಗಳು ತೇಜಸ್ವಿನಿ ಹುಬ್ಬಳ್ಳಿಯಲ್ಲಿ ಇಂಜಿನಿಯರಿಂಗ್ ಶಿಕ್ಷಣವನ್ನು ಯಶಸ್ವಿಯಾಗಿ ಮುಗಿಸಿ, ನಂತರ ಸ್ವಲ್ಪ ದಿನಗಳಲ್ಲಿಯೇ ಧಾರವಾಡದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಲೆಕ್ಚರರ್ ಆಗಿ ಕೆಲಸಕ್ಕೆ ಸೇರಿದಳು. ಆಗ ತೇಜಸ್ವಿನಿ ಒಮ್ಮೊಮ್ಮೆ ಬೆಂಗಳೂರಿಗೆ ಹೋಗಬೇಕಾಗುತ್ತಿತ್ತು. ಹೀಗೆ ಒಂದು ಸಲ ಇಂಟರ್ವ್ಯೂಗೆಂದು ಹೋದಾಗ ಅನಂತಕುಮಾರ್ ಅವರು ಕೂಡ ಬೆಂಗಳೂರಿಗೆ ಬಂದಿದ್ದರು. ಅವರಿಬ್ಬರನ್ನೂ ನನ್ನ ಪತಿ ಶ್ರೀ ಪ್ರಭಾಕರ್ ಓಕ್ ಅವರು ನೋಡಿ , ಆ ಹುಡುಗ ಯಾರು ಎಂದು ಮಗಳನ್ನು ವಿಚಾರಿಸಿದರು. ಅನಂತಕುಮಾರ್ ಎ.ಬಿ.ವಿ.ಪಿ ಯಲ್ಲಿ ಜನರಲ್ ಸೆಕ್ರೆಟರಿಯಾಗಿದ್ದಾರೆ , ಎಲ್.ಎಲ್. ಬಿ. ಪದವೀಧರ ಅಂತೆಲ್ಲ ಹೇಳಿದಳು. ಆದರೆ ಅವರಿಬ್ಬರ ಮದುವೆಯ ಪ್ರಸ್ತಾಪ ಬರುವಾಗ, ಪ್ರಭಾಕರ್ ಓಕ್ ಅವರಿಗೆ ಅಷ್ಟೊಂದು ಮನಸ್ಸಿರಲಿಲ್ಲ . ಹುಡುಗ ಎಲ್.ಎಲ್.ಬಿ ಓದಿದ್ದರೂ ಖಚಿತವಾದ ಉದ್ಯೋಗವಿಲ್ಲ. ಮುಂದೆ ಸಮಸ್ಯೆಯಾಗಬಹುದು ಎಂದು ಅವರಿಗೆ ಅನ್ನಿಸುತ್ತಿತ್ತು .ಆದರೆ ವಿಚಾರಿಸಿದಾಗ ಅನಂತಕುಮಾರ್ ಒಳ್ಳೆಯ ಮನೆತನದವರೆಂದೂ ಅವರ ತಂದೆ ತಾಯಿಯರು ತುಂಬಾ ಒಳ್ಳೆಯವರೆಂದೂ ಗೊತ್ತಾಯಿತು. ಹಾಗಾಗಿ ಮದುವೆ ಮಾಡಲು ಅಡ್ಡಿ ಇಲ್ಲ ಎಂದು ನಮ್ಮ ಮನೆಯವರಿಗೆ ಸಮಾಧಾನವಾಯಿತು. ನಮ್ಮ ಮಗ ಪ್ರದೀಪನಿಗೂ ಅನಂತಕುಮಾರ್ ಅವರ ಪರಿಚಯ ಇತ್ತು . ಅವರು ಬಹಳ ದೇಶಭಕ್ತರು ಬಹಳ ಜಾಣರು ಶ್ರದ್ಧೆಯಿಂದ ದುಡಿಯುವಂಥವರು . ಸತ್ಯವಂತ ಎಂದೆಲ್ಲ ಪ್ರದೀಪನು ನಮಗೇ ಹೇಳಿದ . ಆಗ ನಮಗೆ ಸ್ವಲ್ಪ ನೆಮ್ಮದಿಯಾಯಿತು.

ನಂತರ ನಾವಿಬ್ಬರೂ ಅನಂತಕುಮಾರ್ ಅವರ ಮನೆಗೆ ಹೋಗಿ ಅವರ ತಂದೆಯವರಾದ ಶ್ರೀ ನಾರಾಯಣ ಶಾಸ್ತ್ರಿ ಹಾಗೂ ತಾಯಿಯವರಾದ ಶ್ರೀಮತಿ ಗಿರಿಜಾ ಶಾಸ್ತ್ರಿಯವರನ್ನು ಮಾತಾಡಿಸಿಕೊಂಡು ಬಂದೆವು. ಅವರನ್ನು ಭೇಟಿಯಾಗಿ ಬಂದ ನಂತರ ನಮ್ಮ ಮನಸ್ಸಿಗೆ ಬಹಳ ಸಮಾಧಾನವಾಯಿತು. ಅವರು ಕುಲೀನ ಮನೆತನದವರು ಹಾಗೂ ಬಹಳ ಸಂಸ್ಕಾರವಂತರು ಎಂದು ನಮಗೆ ಅರಿವಾಯಿತು . ಹಾಗಾಗಿ ಆತಂಕವೂ ಕಡಿಮೆಯಾಯಿತು. ಇನ್ನು ತೇಜಸ್ವಿನಿ ಮತ್ತು ಅನಂತಕುಮಾರ್ ಅವರ ಮದುವೆ ಮಾಡಬೇಕು ಎಂದು ನಿಶ್ಚಯಿಸಿದೆವು. ನಾರಾಯಣ ಶಾಸ್ತ್ರಿಯವರಿಗೆ ಜ್ಯೋತಿಷ್ಯ ಜ್ಞಾನವಿತ್ತು. ಆದರೆ, ವಧೂವರರ ಜನ್ಮಪತ್ರಿಕೆ ತಾಳೆ ಮಾಡಿ ನೋಡುವುದು ಅದೆಲ್ಲ ಏನೂ ಬೇಕಾಗಿಲ್ಲ ಎಂದೇ ಅವರು ಹೇಳಿದರು. ನಂತರ ಅವರೇ ಹೇಳಿದರು, ನಮಗೆ ಏನೂ ಬೇಕಾಗಿಲ್ಲ. ವರದಕ್ಷಿಣೆ ಅಂಥಾದ್ದೇನೂ ಕೊಡುವ ಕೇಳುವ ಕಾರಣವೇ ಇಲ್ಲ . ನೀವು ನಿಮಗೆ ಹೇಗೆ ಅನುಕೂಲವಾಗುತ್ತದೋ ಹಾಗೇ ಮದುವೆ ಮಾಡಿಕೊಡಿ ಎಂದು ಅವರು ಸ್ಪಷ್ಟವಾಗಿ ಹೇಳಿದರು. ಡಿಸೆಂಬರ್ ೧೦ ೧೯೮೮ರಂದು ತೇಜಸ್ವಿನಿ ಹಾಗೂ ಅನಂತಕುಮಾರ್ ಅವರ ಮದುವೆ ಯ ನಿಶ್ಚಿತಾರ್ಥ ಸಮಾರಂಭ ನಮ್ಮ ಮನೆಯಲ್ಲೇ ನಡೆಯಿತು. ನಮ್ಮ ಮನೆಯ ಮಹಡಿಯ ಮೇಲೆ ಕುರ್ಚಿಗಳನ್ನು ಹಾಕಿ ಅಲ್ಲಿ ಊಟದ ವ್ಯವಸ್ಥೆಯನ್ನು ಮಾಡಿದ್ದೆವು. ಕಾರ್ಯಕ್ರಮ ಹಾಲ್‌ನಲ್ಲಿ ಆಯಿತು. .ಅನಂತಕುಮಾರ್ ಮನೆತನದವರು ಮುಲಕನಾಡು ತೆಲುಗು ಬ್ರಾಹ್ಮಣರು; ನಾವು ಮರಾಠಿ ಕನ್ನಡಿಗ ಚಿತ್ಪಾವನ ಬ್ರಾಹ್ಮಣರು . ನಮ್ಮ ನಮ್ಮ ಪದ್ಧತಿಗಳು ಬೇರೆ ಬೇರೆ. ಆದರೆ ವಿಚಾರಗಳು ಬಹಳ ಉತ್ತಮವಾಗಿದ್ದುದರಿಂದ ಏನೂ ತೊಂದರೆಯಾಗಲಿಲ್ಲ.

ಮುಂದೆ ಫೆಬ್ರವರಿ ೧೫, ೧೯೮೯ರಂದು ತೇಜಸ್ವಿನಿಯ ಮದುವೆ ಆರ್.ಎನ್.ಶೆಟ್ಟಿ ಕಲ್ಯಾಣ ಮಂಟಪ ಹುಬ್ಬಳ್ಳಿಯಲ್ಲಿ ಬಹಳ ಸಂಭ್ರಮದಿಂದ ಜರುಗಿತು. ಮದುವೆಗೆ ೧೦೦೦ ದಿಂದ ೧೨೦೦ ಜನರು ಮದುವೆಗೆ ಬಂದಿದ್ದರು. ನಮ್ಮವರು ೨೦೦ ಜನ ಅವರ ಕಡೆಯವರು ೧೦೦೦ ಜನ ಈ ರೀತಿಯಾಗಿ ಲೆಕ್ಕ ಹಾಕಿದ್ದೆವು. ಆ ಕಾಲದಲ್ಲಿ ಮದುವೆ ಸಮಾರಂಭದ ನಿರ್ವಹಣೆಯನ್ನು ಹೊರಗಿನವರಿಗೆ ಕಾಂಟ್ರಾಕ್ಟ್ ಕೊಡುವುದಾಗಲಿ, ಆ ತರಹದ ಅನುಕೂಲಗಳಾಗಲಿ ಹುಬ್ಬಳ್ಳಿಯಲ್ಲಿ ಇರಲಿಲ್ಲ. ನಮ್ಮ ಭಾವ ರಾಮಭಾವು ಅಠವಲೆ,ನನ್ನ ತಂಗಿ ವಿದ್ಯಾ ಮೋಡಕ, ಮೈದುನ ಲಕ್ಷ್ಮಣರಾವ ಓಕ ಮುಂತಾದ ಕುಟುಂಬದವರೂ, ಹಾಗೂ ಓಕ ಪರಿವಾರಕ್ಕೆ ಆತ್ಮೀಯರಾದ ಮುಕುಂದನಾತು, ಶ್ರೀ ದತ್ತಾ ಜೋಷಿ ಅವರೆಲ್ಲ ಬಹಳ ಸಹಾಯ ಮಾಡಿದರು. ಮದುವೆ ತಯಾರಿಯನ್ನು ಶುರುಮಾಡಿದೆವು. ಎಲ್ಲ ದಿನಸಿ ಮತ್ತಿತರ ಸಾಮಾನುಗಳನ್ನು ಮನೆಯಲ್ಲಿಯೇ ತಂದು ಮಾಡುವುದು. ನಮಗೆ ಮೊದಲಿನಿಂದಲೂ



ಶ್ರೀಮತಿ ಪ್ರತಿಭಾ ಮತ್ತು ಶ್ರೀ ಪ್ರಭಾಕರ ಓಕ್
(ತೇಜಸ್ವಿನಿಯವರ ತಾಯಿ ತಂದೆ)



ಪರಿಚಯವಿದ್ದ ಅಡುಗೆಯವರು- ಹಳೇಹುಬ್ಬಳ್ಳಿಯವರಾದ ಶ್ರೀ ಕುಲಕರ್ಣಿ ಬಂಧುಗಳು ಎಲ್ಲವನ್ನು ತಯಾರು ಮಾಡಿದರು. ಬಹಳ ಜನವಂತೂ ಬರುತ್ತಾರೆ, ರಾಜಕೀಯದವರು ಸಾಕಷ್ಟು ಜನರು ಬರುತ್ತಾರೆ ಹಾಗಾಗಿ ಮದುವೆಯಲ್ಲಿ ಏನೂ ಕೊರತೆಯಾಗಬಾರದು ಎಂದೆಲ್ಲ ವಿಚಾರವನ್ನು ಮಾಡಿದ್ದೆವು.

ಮದುವೆಯ ಶಾಸ್ತ್ರಗಳು ಮುಲುಕನಾಡು ಪದ್ಧತಿ ಮತ್ತು ನಮ್ಮ ಚಿತ್ಪಾವನ ಬ್ರಾಹ್ಮಣರ ಪದ್ಧತಿಯಂತೆ ಸಾಂಗವಾಗಿ ನಡೆದವು. ಬೆಂಗಳೂರಿನಿಂದ ವರನ ಕಡೆಯ ಶಾಸ್ತ್ರಿಗಳು ಮತ್ತು ಧಾರವಾಡದಿಂದ ನಮ್ಮ ಕಡೆಯ ಪುರೋಹಿತರಾಗಿ ನನ್ನ ಪತಿಯ ಸೋದರಮಾವ ಶ್ರೀನಿವಾಸ ಫಾಣೇಕರರವರು ಎರಡೂ ದಿನ ಇದ್ದರು. ಮದುವೆಗೆ ಬಹಳ ಜನವೇನೋ ಬಂದಿದ್ದರು. ಆದರೆ, ಅದೇ ದಿನ ಎರಡು ಮೂರು ಕಡೆ ಮದುವೆಯಿತ್ತು. ಹಾಗಾಗಿ ಅಲ್ಲಿ ಇಲ್ಲಿ ಬಹಳ ಗಲಾಟೆ ಇದ್ದೇ ಇತ್ತು. ಮದುವೆಯ ಸಮಾರಂಭ ಶಾಸ್ತ್ರೋಕ್ತವಾಗಿ ಸಂಭ್ರಮದಿಂದ ನಡೆಯಿತು. "ಧಾರೆ" ಸಮಯದಲ್ಲಿ ತೇಜಸ್ವಿನಿ ಕಚ್ಚೆಸೀರೆ,ಹಾಗೂ ಅಳಿಯ ಅನಂತಕುಮಾರ ಕಚ್ಚೆಪಂಚೆ ಮುಗುಟ ಉಟ್ಟಿದ್ದರು. ನವದಂಪತಿಗಳು ಸುಂದರವಾಗಿ ಕಾಣುತ್ತಿದ್ದರು. ಅಕ್ಷತೆ ಬಿದ್ದ ಮೇಲೆ ವಿವಾಹದ ಎಲ್ಲ ವಿಧ್ಯುಕ್ತ ಕಾರ್ಯಕ್ರಮಗಳು ಆಗುವವರೆಗೆ ಪುರೋಹಿತರು ವಧೂವರರಿಗೆ ಶುಭಾಶಯ ಹೇಳಿ ಉಡುಗೊರೆ ನೀಡುವುದಕ್ಕೆ ಯಾರಿಗೂ ಅವಕಾಶ ಕೊಡುತ್ತ ಇರಲಿಲ್ಲ. ಹಾಗಾಗಿ ಉಡುಗೊರೆ ಕೊಡಲು ಬಂದವರ ಸರತಿ ದೊಡ್ಡ ಸಾಲಾಗಿ ಬಿಟ್ಟಿತ್ತು.

ಮದುವೆಗೆ ಶ್ರೀ ಜಗನ್ನಾಥರಾವ್ ಜೋಷಿಯವರು, ಶ್ರೀ ಯಡಿಯೂರಪ್ಪನವರು ಮೊದಲಾಗಿ ಆರ್.ಎಸ್.ಎಸ್., ವಿದ್ಯಾರ್ಥಿ ಪರಿಷತ್ತಿನ ಜಿಲ್ಲಾಪ್ರತಿನಿಧಿಗಳು ಹಾಗೂ ಬಿಜೆಪಿಯ ಅನೇಕ ರಾಜಕೀಯ ಮುಖಂಡರು ರಾಜ್ಯದೆಲ್ಲೆಡೆಯಿಂದ ಆಗಮಿಸಿದ್ದರು. ಅನಂತಕುಮಾರರ ಬಂಧುಗಳಾದ ಖ್ಯಾತ ಜ್ಯೋತಿಶ್ಶಾಸ್ತ್ರಜ್ಞ ಡಾ. ಬಿ.ವಿ.ರಾಮನ್, ಖ್ಯಾತ ವೈದ್ಯರಾದ ಪದ್ಮಶ್ರೀ ಡಾ, ನೀಲಕಂಠರಾವ್, ಶ್ರೀ ಅನಂತರಾಮ್ ಮೊದಲಾದವರು ಉಪಸ್ಥಿತರಿದ್ದರು. ನನ್ನ ತಂದೆ ಶ್ರೀ ಗಣೇಶ ಗಾಡಗೀಳ, ನನ್ನ ಅತ್ತೆಮಾವಂದಿರು ಶ್ರೀಮತಿ ಲಕ್ಷ್ಮೀಬಾಯಿ ಮತ್ತು ಶ್ರೀ ಅನಂತರಾವ್ ಓಕ್, ನನ್ನ ಪತಿಯ ಇನ್ನೊಬ್ಬ ಸೋದರಮಾವ ಸಮಾಜ ಪುಸ್ತಕಾಲಯದ ಸಂಸ್ಥಾಪಕ ಭಾಲಚಂದ್ರ ಫಾಣೇಕರ ಮೊದಲಾದ ಹಿರಿಯರು ಉಪಸ್ಥಿತರಿದ್ದು ವಧೂವರರನ್ನು ಆಶೀರ್ವದಿಸಿದರು. ಮದುವೆಯಾಗಿ ಒಂದು ವಾರದ ನಂತರ ಬೆಂಗಳೂರಿನಲ್ಲಿ ಅನಂತಕುಮಾರರ ತಾಯಿ ಶ್ರೀಮತಿ ಗಿರಿಜಾ ಶಾಸ್ತ್ರಿಯವರ ಮನೆಯಲ್ಲಿ ಆರತಕ್ಷತೆ ಕಾರ್ಯಕ್ರಮ ಆಯಿತು. ಈ ಕಾರ್ಯಕ್ರಮದಲ್ಲಿಯೂ ಶ್ರೀ ಯಾದವರಾವ್ ಜೋಷಿಯವರನ್ನೊಳಗೊಂಡು ಅನೇಕ ಹಿರಿಯರು ಹಾಜರಿದ್ದು ವಧೂವರರನ್ನು ಹರಸಿದರು. ಹೀಗೆ ತೇಜಸ್ವಿನಿ ಅನಂತಕುಮಾರರ ವಿವಾಹವು ಗುರುಹಿರಿಯರ ಆಶೀರ್ವಾದದೊಂದಿಗೆ ಯಾವುದೇ ಅಡೆತಡೆಗಳಿಲ್ಲದೆ ನೆರವೇರಿತು. ಅವರ ಬದುಕಿನಲ್ಲಿ ಹೊಸ ಅಧ್ಯಾಯವೊಂದು ಪ್ರಾರಂಭವಾಯಿತು.





## ಅನಂತ ಚಿತ್ರಸಂಪುಟ

( ಫೆಬ್ರವರಿ ತಿಂಗಳ ನೆನಪಿನ ಹಲವು ಚಿತ್ರಗಳು )

ಸಂಕಲನ: ಶ್ರೀಮತಿ ತೇಜಸ್ವಿನಿ ಅನಂತಕುಮಾರ್



ಬೆಂಗಳೂರಿನಲ್ಲಿ ನಡೆದ ವಾರ್ಷಿಕ ಕೃಷಿಮೇಳದ ವೀಕ್ಷಣೆಯ ದೃಶ್ಯ



ದೆಹಲಿಯ ತಮ್ಮ ಕಚೇರಿಯಲ್ಲಿ ವಿಚಾರವಿನಿಮಯದಲ್ಲಿ ತೊಡಗಿರುವ ಶ್ರೀ ಅನಂತಕುಮಾರ್




ಬೆಂಗಳೂರಿನಲ್ಲಿ ಶ್ರೀ ಅನಂತಕುಮಾರ್ ಆಯೋಜಿಸಿದ್ದ
ನ್ಯಾಷನಲ್ ಫಾರ್ಮ ಎಕ್ಸ್ ಪೋ ಪ್ರದರ್ಶನದ ಉದ್ಘಾಟನೆಯ ಸಂದರ್ಭದ ಚಿತ್ರ




ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ಆಯೋಜಿಸಿದ್ದ ಸಮಾರಂಭವೊಂದರಲ್ಲಿ
ಶ್ರೀ ಅನಂತಕುಮಾರ್ ಅವರನ್ನು ಸನ್ಮಾನಿಸುತ್ತಿರುವ ಚಿತ್ರ




ಭಾರತೀಯ ಜನತಾ ಪಕ್ಷ ಆಯೋಜಿಸಿದ್ದ ರಾಜ್ಯ ಮಾಧ್ಯಮ ಕಾರ್ಯಾಗಾರದಲ್ಲಿ
ಮಾಧ್ಯಮ ಪ್ರತಿನಿಧಿಗಳನ್ನು ಉದ್ದೇಶಿಸಿ ಶ್ರೀ ಅನಂತಕುಮಾರ್ ಭಾಷಣ



ಬೆಂಗಳೂರಿನ ಸಂಸದರ ಕಚೇರಿಯಲ್ಲಿ ತಮ್ಮ ಭೇಟಿಗೆ
ಬಂದವರೊಡನೆ ಶ್ರೀ ಅನಂತಕುಮಾರ್